App. F. IX-4

Previous References 1930-31 (Census

File No. 15-29

Serial Nos. 5

Later References
Census. 35-39 (1-2)
" 18-39, Pt. 6.

General and Revenue Secretariat.

Serial Nos.

Part B for July 1930.

SUBJECT

Re Govt. Circulars 3 & 4 of Re. Kannada Translation of Part I of the Code of Census procedure

---

Jan 1931

Cen 60-29-5

OFFICE OF THE CENSUS SUPERINTENDENT IN MYSORE,
RACE VIEW, HIGH GROUND,

Bangalore, dated.....19th June 1930.....*193*

G.O. 7765

M. VENKATESA IYENGAR, Esq., M.A.,
CENSUS SUPERINTENDENT IN MYSORE.
BANGALORE.

SEC. TO THE COUNCIL
23 JUN 1930
9505

To

N.Madhava Rao, Esq., B.A., B.L.,
Chief Secretary to the Government of Mysore,
B A N G A L O R E.

Sir,

I have the honor to forward herewith for perusal of Government Circulars 3 and 4 and of the Kannada Translation of Part I of the Code of Census procedure. Circular 3 prescribes the dates for the various stages of the Census operations in the Districts.

I have the honor to be,
Sir,
Your most obedient servant,

M. Venkatesa Iyengar
Census Superintendent.

For perusal
19/6
21/6
2d Member
4/7
4/7

GENERAL BRANCH
5 JULY

ಮೈಸೂರು ಸೆನ್ಸಸ್ ಕೋಡ್

1931

1ನೇ ಭಾಗ

ಬೆಂಗಳೂರು :
ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು
೧೯೩೦

೧೯೩೧ನೇ ಇಸವಿಯಲ್ಲಿ ಮೈಸೂರು ದೇಶದಲ್ಲಿ ತೆಗೆಯುವ ಸೆನ್ಸಸ್ ಅಥವಾ ಪ್ರಜಾ ಗಣಿತಿಯ ಏರ್ಪಾಡಿಗೆ ಸಂಬಂಧಪಟ್ಟ ನಿಯಮಗಳು.

ಪ್ರಕರಣ ೧.

ಮೊದಲನೇ ಅಧ್ಯಾಯ.

ಪೀಠಿಕೆ.

ಸೆಕ್ಷನ್ ೧.

ಎಣಿಕೆಯ ತಾರೀಖು.—ಹತ್ತು ವರ್ಷಗಳಿಗೊಂದುಸಾರಿ ಇಂಡಿಯಾ ದೇಶದಲ್ಲೆಲ್ಲಾ ನಡೆಯತಕ್ಕ ಈ ಸೆನ್ಸಸ್ ಎಣಿಕೆಯು ಇಂಡಿಯಾ ದೇಶದ ಇತರ ಭಾಗಗಳಲ್ಲಿ ನಡೆಯುವಂತೆ ಮೈಸೂರು ದೇಶದ ಎಲ್ಲಾ ಭಾಗಗಳಲ್ಲೂ ೧೯೩೧ನೇ ಇಸವಿ ಫೆಬ್ರವರಿ ೨೭ನೇ ತಾರೀಖು (ಪ್ರಮೋದೂತ ಸಂವತ್ಸರ ಫಾಲ್ಗುಣ ಶುದ್ಧ ನವಮಿ) ಗುರುವಾರದ ರಾತ್ರಿ ನಡೆಯುತ್ತದೆ. ರಾತ್ರಿ ವೇಳೆ ಸ್ಥಳಕ್ಕೆ ಹೋಗಿ ಎಣಿಕೆ ಮಾಡಲು ಸಾಧ್ಯವಾಗದೆ ಇರುವ ಕಾರಣದಿಂದ ಅಥವಾ ಇತರ ಕಾರಣಗಳಿಂದ ಆ ರಾತ್ರಿ ಎಣಿಕೆ ನಡೆಯದ ಕೆಲವು ಪ್ರದೇಶಗಳಲ್ಲಿ ಮಾತ್ರ ಅದು ಅದೇ ತಿಂಗಳು ೨೭ನೆ ತಾರೀಖು ಶುಕ್ರವಾರ ಪ್ರಾತಃಕಾಲ ನಡೆಯುತ್ತದೆ. ಈ ಪ್ರದೇಶಗಳು ಯಾವುವೆಂದು ಕೆಳಗೆ ೨೭ನೆ ಪ್ಯಾರಾದಲ್ಲಿ ನಮೂದಿಸಿದೆ.

೨ ಸೆನ್ಸಸ್ ಕೋಡ್ ಅಥವಾ ನಿಯಮಗಳ ಪುಸ್ತಕ.—ಎಣಿಕೆಯ ಏರ್ಪಾಡುಗಳನ್ನು ವಿಧಿಸುವ ನಿಯಮಗಳ ಈ ಪುಸ್ತಕವನ್ನು ಕೆಲಸ ಮುಂದು ವರಿದ ಹಾಗೆ ಭಾಗ ಭಾಗವಾಗಿ ಪ್ರಕಟಿಸಲಾಗುತ್ತದೆ. ಈಗ ಪ್ರಚುರ ಮಾಡು ತ್ತಿರುವ ಈ ಪುಸ್ತಕ ಹಂಗಾಮಿಯಾದದ್ದು. ಅವಶ್ಯ ಬಿದ್ದಾಗ ಅದರಲ್ಲಿ ತಿದ್ದುಪಾ ಟುಮಾಡಲಾಗುತ್ತದೆ.

೩. ಸರ್ಕ್ಯುಲರುಗಳು.—ಕೋಡಿನಲ್ಲಿರುವ ತಿಳುವಳಿಕೆಗಳ ಜೊತೆಗೆ ಅವಶ್ಯಬಿದ್ದಾಗ ಸರ್ಕ್ಯುಲರುಗಳನ್ನು ಕೊಡಲಾಗುತ್ತದೆ.

೪. ಡಿಸ್ಟ್ರಿಕ್ಟುಗಳಲ್ಲಿ ನಡೆಯಬೇಕಾದ ಕೆಲಸಗಳು.—ಸೆನ್ಸಸ್ ಸಂಬಂ ಧವಾಗಿ ಡಿಸ್ಟ್ರಿಕ್ಟುಗಳಲ್ಲಿ ನಡೆಯಬೇಕಾದ ಕೆಲಸಗಳನ್ನು ಕ್ರಮಶಃ ಮುಂದೆ ನಮೂದು ಮಾಡುವ ಏಳು ಭಾಗಗಳಾಗಿ ವಿಂಗಡಿಸಬಹುದು.

(i) ಸೆನ್ಸಸ್ ವಿಭಾಗಗಳ ಮಸೂದೆಯನ್ನು ತೋರಿಸತಕ್ಕ ಥಾರ್ಜ್ ಪಟ್ಟಿಯ ತಯಾರಿ.—ಎಣಿಕೆಗೆ ಅನುಕೂಲವಾಗುವಂತೆ ದೇಶವನ್ನು ತುಕಡಿಗಳಾಗಿ ವಿಂಗಡಿಸುವುದು ಸೆನ್ಸಸ್ ತೆಗೆಯುವುದರಲ್ಲಿ ಮೊದಲು ನಡೆಯಬೇಕಾದ ಕೆಲಸ. ಪ್ರತಿಯೊಬ್ಬ ಪ್ರಜೆಯನ್ನು ಎಣಿಕೆಮಾಡುವುದಕ್ಕೂ, ಎಣಿಕೆಮಾಡುವವರ ಕೆಲಸದ ಮೇಲ್ವಿಚಾರಣೆ ಮಾಡುವುದಕ್ಕೂ, ಅನುಕೂಲಿಸುವಂತೆ ತಾಲ್ಲೂಕು ಪಟ್ಟಣ ಪಹರುಗಳನ್ನು "ಥಾರ್ಜ್" "ಸರಕಲ್" ಮತ್ತು "ಬ್ಲಾಕು" ಗಳಾಗಿ ವಿಂಗಡಿಸಬೇಕು. ಅಲ್ಲದೆ ಈ ಸೆನ್ಸಸ್ ತುಕಡಿಗಳು ಯಾರ್ಯಾರ ಮೇಲ್ವಿಚಾರಣೆಯಲ್ಲಿರತಕ್ಕದ್ದೊ ಅಂಥವರ ಹೆಸರುಗಳನ್ನು ತೋರಿಸುನ ಪಟ್ಟಿಯೊಂದನ್ನು ಸಿದ್ಧಪಡಿಸಬೇಕು.

(ii) ಮನೆಗಳಿಗೆ ನಂಬರು ಹಾಕುವಿಕೆ.—ಸೆನ್ಸಸ್ ನಡೆಯುವ ರಾತ್ರಿ ಯಾವ ಮನೆ ಯಾವ ಕಟ್ಟಡಗಳಲ್ಲಿ ಜನರು ವಾಸವಾಗಿರಬಹುದೋ ಅಂಥ ಮನೆ ಕಟ್ಟಡಗಳಿಗೆಲ್ಲಾ ಎಣಿಕೆಯ ಸೌಕರ್ಯಕ್ಕಾಗಿ ಒಂದೊಂದು ನಂಬರು ಹಾಕಬೇಕು. ಈ ನಂಬರಿಗೂ ಖಾನೇಷುಮಾರಿ ಅಥವಾ ಮುನಿಸಿಪಾಲಿಟಿಯ ನಂಬರಿಗೂ ಸಂಬಂಧವಿಲ್ಲ ಇದು ಸೆನ್ಸಸ್ ಬಗ್ಗೆ ಹಾಕಿರುವ ಪ್ರತ್ಯೇಕವಾದ ಸಂಖ್ಯೆ.

(iii) ತಿದ್ದುಪಡಿಯಾದ ಥಾರ್ಜ್ ಪಟ್ಟಿಯ ತಯಾರಿ.—ಮನೆಗಳಿಗೆ ನಂಬರು ಹಾಕಿ ಪ್ರತಿಯೊಂದು ತುಕಡಿಯಲ್ಲೂ ಇಷ್ಟೇ ಮನೆಗಳಿವೆಯೆಂದು ನಿರ್ಣಯವಾದ ಮೇರೆ ಮೊದಲು ಮಾಡಿದ ಥಾರ್ಜ್ ಪಟ್ಟಿಯಲ್ಲಿ ಬದಲಾವಣೆಗಳೇನಾದರೂ ಅವಶ್ಯಕವೇ ಎಂದು ನೋಡಿ ಅಂಥ ಬದಲಾವಣೆಗಳನ್ನು ಒಳಗೊಂಡ ಆಖೈರು ಥಾರ್ಜ್ ಪಟ್ಟಿಯೊಂದನ್ನು ತಯಾರು ಮಾಡಬೇಕು.

(iv) ಸೆನ್ಸಸ್ ಆಫೀಸರುಗಳ ನೇಮಕ ಮತ್ತು ತರಪೇತು. ಬ್ಲಾಕು ಮತ್ತು ಸರಕಲ್‌ಗಳಲ್ಲಿ ಕೆಲಸಮಾಡಲು ನೇಮಕವಾದ ಎನ್ಯೂಮರೇಟರುಗಳಿಗೂ ಸೂಪರವೈಸರುಗಳಿಗೂ ಅವರ ಅಧಿಕಾರವನ್ನು ಸೂಚಿಸಿ ನಿರೂಪಗಳನ್ನು ಕೊಡಬೇಕು. ಅಲ್ಲದೆ ಬಾಯಿಮಾತಿನಿಂದಲೂ ಅಭ್ಯಾಸಮಾಡುವುದಕ್ಕಾಗಿಯೇ ನಿಯಾಮಕವಾಗಿರುವ ಅಭ್ಯಾಸದ ಎಣಿಕೆಯ ಪತ್ರಿಕೆಯನ್ನು ಅವರಿಂದ ಬರೆಸುವುದರಿಂದಲೂ ಅವರನ್ನು ಸೆನ್ಸಸ್ ಕೆಲಸದಲ್ಲಿ ತರಪೇತು ಮಾಡಬೇಕು.

(v) ಮೊದಲ ಎಣಿಕೆ.—ಆಖೈರ್ ಎಣಿಕೆ ನಡೆಯುವ ರಾತ್ರಿಗೆ ಸುಮಾರು ಎರಡು ತಿಂಗಳು ಪೂರ್ವಭಾವಿಯಾಗಿ ಎಣಿಕೆಯನ್ನು ಆರಂಭಮಾಡಬೇಕು. ಈ ಎಣಿಕೆಯಲ್ಲಿ ಸೆನ್ಸಸ್ ತುಕಡಿಗಳಲ್ಲಿ ಪ್ರತಿಯೊಂದು ಮನೆಯಲ್ಲೂ ವಾಸವಾಗಿರುವ ಪ್ರತಿಯೊಬ್ಬ ಇಸಮಿನ ತಪ್ಸೀಲನ್ನೆಲ್ಲಾ "ಷೆಡ್ಯೂಲ್"ಯೆಂಬ ನಮೂನೆಯಲ್ಲಿ ದಾಖಲ್ ಮಾಡಲಾಗುತ್ತದೆ.

(vi) ಆಖ್ಮೈರ್ ಎಣಿಕೆ.—ಆಖ್ಮೈರ್ ಸೆಂಸಸ್ ತೆಗೆಯುವ ರಾತ್ರಿ ಮನೆ ಮನೆಗೂ ಹೋಗಿ ವಿಚಾರ ಮಾಡಿ ಆಗಿನ ವಿದ್ಯಮಾನಕ್ಕೆ ಅನುಸಾರವಾಗಿ ಮೊದಲನೇ ಎಣಿಕೆಯ ಷೆಡ್ಯೂಲುಗಳನ್ನು ತಿದ್ದಿ ಸರಿಪಡಿಸಬೇಕು

(vii) ಗೋಷ್ವಾರೆಗಳನ್ನು ಕಳುಹಿಸುವಿಕೆ.—ಪ್ರತಿಯೊಂದು ಷೆಡ್ಯೂಲಿನಲ್ಲೂ ಬಾರಾಗಿರುವ ಮನೆ ಮತ್ತು ಜನದ ಗೋಷ್ವಾರೆಯೊಂದನ್ನು ವಿಧಾಯಕವಾದ ರೀತಿಯಲ್ಲಿ ತಯಾರ್ಮಾಡಿ ಸೆಂಸಸ್ ಸೆಂಟ್ರಲ್ ಆಫೀಸಿಗೆ ಕಳುಹಿಸಬೇಕು.

೫. ಸೆಂಟ್ರಲ್ ಆಫೀಸಿನಲ್ಲಿ ನಡೆಯುವ ಕೆಲಸ.—ಷೆಡ್ಯೂಲುಗಳಲ್ಲಿ ನಮೂದಿಸಿರುವ ಜನ ಸಂಖ್ಯೆಗೆ ಸಂಬಂಧಪಟ್ಟ ತಪ್ಸೀಲೆಲ್ಲಾ ಸೆಂಟ್ರಲ್ ಆಫೀಸಿನಲ್ಲಿ ವಿಧಾಯಕವಾದ ಮತ, ಜಾತಿ, ಜನ್ಮಭೂಮಿ, ಕಸಬು, ಭಾಷೆ ವಗೈರೆ ಕೆಲವು ನಮೂನೆಗಳಲ್ಲಿ ಅಡಕ ಮಾಡಲ್ಪಡುತ್ತದೆ. ಮತ್ತು ಇದರಿಂದ ಗ್ರಹಿಸಬಹುದಾದ ವಿಚಾರಗಳನ್ನೊಳಗೊಂಡ ವರದಿಯೊಂದು ಆಮೇಲೆ ತಯಾರಾಗುತ್ತದೆ.

೬. ಸೆಂಸಸ್ ಕೆಲಸದ ಉಸ್ತುವಾರಿಗೆ ಬೇಕಾದ ಹುದ್ದೇದಾರರು. ಡಿಸ್ಟ್ರಿಕ್ಟುಗಳಲ್ಲಿ ನಡೆಯುವ ಸೆಂಸಸ್ ಕೆಲಸಗಳನ್ನು ಆಯಾ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರುಗಳು ಸಬ್ ಡಿವಿಜ್ ಥಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರುಗಳ ಮತ್ತು ತಾಲ್ಲೂಕು ಥಾರ್ಜಿನಲ್ಲಿರುವ ಅಮಲ್ದಾರ್ರುಗಳ ಸಹಾಯದಿಂದ ನಡೆಯಿಸುತ್ತಾರೆ.

ನಗರಗಳಲ್ಲಿ ಪಟ್ಟಣಗಳಲ್ಲಿ ಈ ಕೆಲಸ ಆಯಾಯ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟ್ ಅಥವಾ ಚೀಫ್ ಆಫೀಸರ ಸಹಾಯದಿಂದ ಆಯಾಯ ಪ್ರೆಸಿಡೆಂಟರುಗಳಿಂದ ನಡೆಸಲ್ಪಡುತ್ತದೆ.

ರೈಲ್ವೆ ಸ್ಟೇಷನ್ಗಳ ಎಣಿಕೆಗೂ ಮತ್ತು ರೈಲ್ ಹಾದಿಯ ಅಕ್ಕಪಕ್ಕದಲ್ಲಿರುವ ಮನೆಗಳ ಎಣಿಕೆಗೂ "ರೈಲ್ವೆ ಸೆಂಸಸ್" ಎಂತ ಹೆಸರಿರುವ ಪ್ರಕರಣದಲ್ಲಿ ಮುಂದೆ ಹೇಳುವಂತೆ ಪ್ರತ್ಯೇಕ ಏರ್ಪಾಡು ಮಾಡಲಾಗುತ್ತದೆ.

೭. ಸೆಂಸಸ್ ಸಿಬ್ಬಂದಿ.—ಸೆಂಸಸ್ ರೆಗ್ಯುಲೇಷನ್ನಿನ ಪ್ರಕಾರ ಸರ್ಕಾರದವರೇ ಆಗಲಿ ಸರ್ಕಾರದಿಂದ ಕ್ರಮವಾಗಿ ಅಧಿಕಾರ ಪಡೆದ ಯಾವ ಹುದ್ದೇದಾರನೇ ಆಗಲಿ, ಯಾರನ್ನಾದರೂ ಯಾವದಾದರೂ ಒಂದು ಪ್ರಾಂತದಲ್ಲಿ ಸೆಂಸಸ್ ತೆಗೆಯುವುದಕ್ಕೇ ಆಗಲಿ, ತೆಗೆಯಲು ಸಹಾಯ ಮಾಡುವುದಕ್ಕೇ ಆಗಲಿ, ಈ ತೆಗೆಯುವ ಕೆಲಸದ ಉಸ್ತುವಾರಿ ಬಗ್ಗೆ ಆಗಲಿ ನೇಮಿಸಬಹುದು. ಸರ್ಕಾರಿ ಇಲಾಖೆಗಳ ಎಲ್ಲಾ ಉದ್ಯೋಗಸ್ಥರನ್ನೂ, ಗ್ರಾಮ ನೌಕರರನ್ನೂ, ಮ್ಯುನಿಸಿಪಲ್ ಮತ್ತು ಇತರ ಸ್ಥಳೀಯ ಸಂಘದ ನೌಕರರನ್ನೂ, ಈ ಕೆಲಸ ಮಾಡಲು ಸಮ್ಮತಿಸುವ ಮಾತುಪರರಾದ ಖಾಸಗಿ ಜನರನ್ನೂ ಮಾಮೂಲಿನಂತೆ ಸೆಂಸಸ್ ಕೆಲಸದಲ್ಲಿ ಸಹಾಯ ಮಾಡಲು ಅಪೇಕ್ಷಿಸಲಾಗುತ್ತದೆ.

೮. ಜನರಿಂದ ಆಗಬೇಕಾದ ಸಹಾಯ.—ಸೆಂಸಸ್ ರೆಗ್ಯುಲೇಷನ್ನಿನ ಪ್ರಕಾರ ಪ್ರತಿಯೊಬ್ಬ ಮನುಷ್ಯನೂ ಸೆಂಸಸ್ ತೆಗೆಯುವ ಕೆಲಸದಲ್ಲಿ ನ್ಯಾಯವಾದ ಸಹಾಯಮಾಡಬೇಕೆಂತ ಕೇಳಿದಾಗ ತನ್ನ ಶಕ್ತಿಗೆ ತಕ್ಕ ಸಹಾಯಮಾಡಲು ಬದ್ಧನಾಗಿದ್ದಾನೆ.

೯. ಕೇಳಿದ ಪ್ರಶ್ನೆಗೆ ಜವಾಬು ಕೊಡಬೇಕೆಂಬ ನಿಯಮ.—ಸೆಂಸಸ್ ತೆಗೆಯುವ ಕೆಲಸದಲ್ಲಿ ನ್ಯಾಯವಾಗಿ ಕೇಳಬಹುದಾದ ಪ್ರಶ್ನೆಗಳಿಗೆಲ್ಲಾ ಪ್ರತಿಯೊಬ್ಬ ಮನುಷ್ಯನೂ ತನಗೆ ತಿಳಿದಮಟ್ಟಿಗೆ ಸರಿಯಾದ ಉತ್ತರಕೊಡಲು ಬದ್ಧನಾಗಿರುವನು. ಆ ರೀತಿ ಜವಾಬು ಕೊಡದಿದ್ದರೆ ಆತನು ಸೆಂಸಸ್‌ರೆಗ್ಯುಲೇಷ್ಷ ಪ್ರಕಾರ ಶಿಕ್ಷೆಗೆ ಗುರಿಯಾಗುತ್ತಾನೆ.

೧೦. ಸೆಂಸಸ್ಸಿಗೆ ಬೇಕಾಗಬಹುದಾದ ನಮೂನೆಗಳು.—ಸೆಂಸಸ್ ಸೂಪರಿಂಟೆಂಡೆಂಟರವರು ಆಗಾಗ್ಗೆ ಕೊಡಬಹುದಾದ ತಿಳುವಳಿಕೆಯ ಪ್ರಕಾರ ಸೆಂಸಸ್ಸಿಗೆ ಸಮ್ಮಂಧಪಟ್ಟ ಎಲ್ಲಾ ನಮೂನೆಗಳನ್ನೂ ಸ್ಥಳೀಯ ಅಧಿಕಾರಿಗಳಿಗೆ ಅಚ್ಚು ಹಾಕಿಸಿ ಕಳುಹಿಸಲಾಗುತ್ತದೆ.

ಸೆಕ್ಷ್ಯೂ ೨.

ಸೆಂಸಸ್ ಪರಿಭಾಷೆ.

೧೧. ಮಾತುಗಳ ವಿವರಣೆ :—ಸೆಂಸಸ್ ಸಂಬಂಧದಲ್ಲಿ ಉಪಯೋಗಿಸುವ ಮಾತುಗಳ ಅರ್ಥವಿವರಣೆಯನ್ನು ಮುಂದೆ ಕೊಟ್ಟಿದೆ.

A. ಸೆಂಸಸ್ ಹುದ್ದೇದಾರರು.

೧೨. ಸೆಂಸಸ್ ಆಫಿಸರ್.—ಸರ್ಕಾರದವರಿಂದಲಾಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಪಡೆದವರಿಂದಲಾಗಲಿ ಯಾವುದಾದರೂ ಪ್ರದೇಶದಲ್ಲಿ ಸೆಂಸಸ್ ತೆಗೆಯುವ ಕೆಲಸದಲ್ಲಿ ಸಹಾಯಮಾಡುವುದಕ್ಕಾಗಿ ಅಥವಾ ಆ ಕೆಲಸದ ಮೇಲ್ವಿಚಾರಣೆ ಬಗ್ಗೆ ನೇಮಕವಾದವರಿಗೆ ಸೆಂಸಸ್ ಆಫಿಸರೆಂತ ಹೆಸರು.

೧೩. ಡಿವಿಜನಲ್ ಸೆಂಸಸ್ ಆಫಿಸರ್.—ಕೆಳಗೆ ವಿವರಿಸಿರುವ "ಥಾರ್ಜು" ಗಳ ಒಂದು ಗುಂಪಿನ ಮೇಲ್ವಿಚಾರಣೆಗಾಗಿ ನೇಮಿಸಲ್ಪಡಬಹುದಾದ ಅಧಿಕಾರಿಗೆ ಡಿವಿಜನಲ್ ಸೆಂಸಸ್ ಆಫಿಸರೆಂತ ಹೆಸರು.

ಡಿಸ್ಟ್ರಿಕ್ಟುಗಳಲ್ಲಿ ರೆವಿನ್ಯೂ ಸಬ್ ಡಿವಿಜ್ ಥಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು, ಡೆಪ್ಯುಟಿ ಕಮಿಷನರವರ ಮೇಲ್ವಿಚಾರಣೆಗೆ ಒಳಪಟ್ಟು, ತಮ್ಮ ಸಬ್ ಡಿವಿಜನ್ನಿಗೆ ಸೇರಿದ ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಿಗೆ ಡಿವಿಜನಲ್ ಸೆಂಸಸ್ ಆಫಿಸರಾಗುತ್ತಾರೆ. ಡೆಪ್ಯುಟಿ ಕಮಿಷನರವರ ಖುದ್ದು ಆಡಳಿತದಲ್ಲಿರುವ ಯಾವದಾದರೂ ತಾಲ್ಲೂಕು ಅಥವಾ ಸಬ್ ತಾಲ್ಲೂಕಿಗೆ ಅವರೋ ಅಥವಾ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರೋ ಡಿವಿಜನಲ್ ಸೆಂಸಸ್ ಆಫಿಸರಾಗುತ್ತಾರೆ. ನಗರಗಳಲ್ಲೂ, ಪಟ್ಟಣಗಳಲ್ಲೂ, ಸ್ಥಳೀಯ ಅಧಿಕಾರಿಗಳ ಅಭಿಪ್ರಾಯವನ್ನು ತಿಳಿದು ಡಿವಿಜನಲ್ ಸೆಂಸಸ್ ಆಫಿಸರುಗಳನ್ನು ಮೊಕರೂರು ಮಾಡಲಾಗುತ್ತದೆ.

೧೪. ಥಾರ್ಜು ಸೂಪರಿಂಟೆಂಡೆಂಟ್.—ಈ ಕೆಳಗೆ ವಿವರಿಸಿರುವ ಒಂದು "ಥಾರ್ಜಿ" ನ ಮೇಲ್ವಿಚಾರಣೆಗೆ ನೇಮಕವಾದ ಹುದ್ದೇದಾರರಿಗೆ "ಥಾರ್ಜು ಸೂಪರಿಂಟೆಂಡೆಂಟ್" ಎಂತ ಹೆಸರು. ಸಾಧಾರಣವಾಗಿ ಗ್ರಾಮಾಂತರದಲ್ಲಿ ಅಮಲ್ದಾರ್ರವರೇ ಆಯಾ ತಾಲ್ಲೂಕಿಗೆ ಥಾರ್ಜು ಸೂಪರಿಂಟೆಂಡೆಂಟರಾಗಿರುತ್ತಾರೆ.

೧೫. ಸೂಪರ್‌ವೈಸರ್.—ಕೆಳಗೆ ವಿವರಿಸಿರುವ ಒಂದು "ಸರ್ಕಲಿನ" ಮೇಲ್ವಿಚಾರಣೆ ತೆಗೆದುಕೊಳ್ಳುವ ಅಧಿಕಾರಿಗೆ ಸೂಪರ್‌ವೈಸರೆಂತ ಹೆಸರು. ಗ್ರಾಮಾಂತರಗಳಲ್ಲಿ ರೆವಿನ್ಯೂ ಇನ್‌ಸ್ಪೆಕ್ಟರೋ, ಪೋಲೀಸ್ ಸಬ್ ಇನ್‌ಸ್ಪೆಕ್ಟರೋ, ಈ ದರ್ಜೆಯ ಇತರ ಇಲಾಖೆಯ ಬೇರೆ ಯಾರಾದರೂ ಅಧಿಕಾರಿಗಳೋ ಈ ಕೆಲಸಕ್ಕೆ ನೇಮಕವಾಗುತ್ತಾರೆ.

೧೬. ಎನ್ಯೂಮರೇಟರ್.—ಕೆಳಗೆ ನಿವರಿಸಿರುವ ಒಂದು ಅಥವಾ ಒಂದಕ್ಕಿಂತ ಹತ್ತಿರ ಒಂದಿರುವ ಎರಡು "ಬ್ಲಾಕಿನಲ್ಲಿ" ಎಣಿಕೆ ತೆಗೆಯಲು ನೇಮಕವಾದ ಅಧಿಕಾರಿಗೆ "ಎನ್ಯೂಮರೇಟರ್" ಎಂತ ಹೆಸರು.

B. ಸೆನಸ್ ವಿಭಾಗಗಳು.

೧೭. ಸೆನಸ್ ಕೆಲಸಗಳಿಗಾಗಿ ಮೈಸೂರು ಸಂಸ್ಥಾನವನ್ನು ಸಿಟಿ ಅಥವಾ ನಗರ, ಟವ್ನ್ ಅಥವಾ ಪಟ್ಟಣ ಮತ್ತು ರೂರಲ್ ಏರಿಯಾ ಅಥವಾ "ಗ್ರಾಮಾಂತರ" ಎಂತ ಮೂರು ಬಗೆಯಾಗಿ ವಿಂಗಡಿಸಲ್ಪಟ್ಟಿದೆ.

೧೮. ಸಿಟಿ, ನಗರ.—ಮುಂದೆ ನಮೂದಿಸುವ ಎಲ್ಲೆಗಳೊಳಗಿನ ಪ್ರಾಂತಕ್ಕೆ ಸಿಟಿ ಯಾ ನಗರವೆಂತ ಹೆಸರು : ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ, ಮೈಸೂರು ಸಿಟಿ ಮ್ಯುನಿಸಿಪಾಲಿಟಿ, ಕೋಲಾರ್ ಗೋಲ್ಡ್ ಫೀಲ್ಡ್ಸ್ ಮೈನಿಂಗ್ ಮತ್ತು ಸ್ಯಾನಿಟರಿ ಬೋರ್ಡ್ ಪ್ರದೇಶ.

೧೯. ಅರ್ಬನ್ ಏರಿಯಾ, ಪಟ್ಟಣ.—ಸರ್ಕಾರಿ ಹುಕುಮಿನಂತೆ ಯಾವ ಪ್ರದೇಶವು ಒಂದು "ಮ್ಯುನಿಸಿಪಾಲಿಟಿ" ಯಾಗಿ ವಿಧಾಯಕಮಾಡಲ್ಪಟ್ಟಿದೆಯೋ ಆ ಪ್ರದೇಶಕ್ಕೆ "ಪಟ್ಟಣ" ವೆಂತ ಹೆಸರು. ನಗರವೆಂದು ಗಣಿಸಿರುವ ಕಾರಣದಿಂದ ಬೆಂಗಳೂರು ಮತ್ತು ಮೈಸೂರನ್ನು ಈ ತರಗತಿಯಲ್ಲಿ ಸೇರಿಸುವುದಿಲ್ಲ. ಮ್ಯುನಿಸಿಪಾಲಿಟಿಯನ್ನು ಏರ್ಪಡಿಸುವಲ್ಲಿ ಮಾಡಿದ ಸರ್ಕಾರದ ಹುಕುಮಿನಲ್ಲಿ ನಮೂದಾದ ಎಲ್ಲೆಗಳೊಳಗೆ ಸೇರಿರುವ ಜಮೀನೆಲ್ಲಾ ಆಯಾ ಪಟ್ಟಣದಲ್ಲಿ ಸೇರಿದ್ದು. ಎಂದರೆ ರೆವಿನ್ಯೂ ಸರ್ವೆ ಪ್ರಕಾರ ಬೇರೆ ಹಳ್ಳಿಯೆಂತ ಗಣನೆಯಾಗಿರುವ ಇತರ ಯಾವ ಹಳ್ಳಿಯ ಜಮೀನು ಆ ಎಲ್ಲೆಯೊಳಗೆ ಸೇರಿದ್ದರೂ ಅದೆಲ್ಲವನ್ನೂ ಪಟ್ಟಣವೆಂದೇ ಭಾವಿಸಬೇಕು. ಇದಕ್ಕೆ ಉದಾಹರಣೆ. "ದಾವಣಗೆರೆ ಟೌನ್" ಎಂದರೆ ದಾವಣಗೆರೆಯಂತ ಹೆಸರಿರುವ ರೆವಿನ್ಯೂ ಹಳ್ಳಿಯ ಜಮೀನುಗಳು ಮಾತ್ರ ಅಲ್ಲ. ದಾವಣಗೆರೆ ಮ್ಯುನಿಸಿಪಲ್ ಎಲ್ಲೆಗೆ ಸೇರಿದ್ದೆಂತ ಸರ್ಕಾರಿ ಹುಕುಮಿನಲ್ಲಿ ನಮೂದಿರುವ ಬಾಜೂ ಗ್ರಾಮಗಳಾದ ಆನೆಕೊಂಡ ಮತ್ತು ನಿಟ್ಟುವಳ್ಳಿ ಗ್ರಾಮಗಳ ಜಮೀನುಗಳೂ "ದಾವಣಗೆರೆ ಟೌನ್" ಗೇ ಸೇರಿದಂತೆ ಭಾವಿಸಬೇಕು.

೨೦. "ಗ್ರಾಮಾಂತರ ಪ್ರದೇಶ".—ಮೇಲೆ ನಮೂದಿರುವ ನಗರ ಪಟ್ಟಣ ಎಂಬ ಪ್ರದೇಶಗಳ ವಿನಾ ಬಾಕಿ ಪ್ರದೇಶವೆಲ್ಲಾ "ಗ್ರಾಮಾಂತರ" ವೆಂತ ಭಾವಿಸಲ್ಪಡುತ್ತದೆ.

೨೧. ಹಳ್ಳಿ.—ರೆವಿನ್ಯೂ ಸರ್ವೆ ಇಲಾಖೆಯವರು ಒಂದು ಹಳ್ಳಿಯೆಂತ ಕರೆದಿರುವ ಒಂದೊಂದು ಪ್ರದೇಶವೂ ಸೆನಸ್ ಲೆಕ್ಕಕ್ಕಾಗಿಯೂ ಹಳ್ಳಿಯೆಂತ ಭಾವಿಸಲ್ಪಡುತ್ತದೆ. ಈ ಮಾತಿನಲ್ಲಿ ಗ್ರಾಮಠಾಣ ಮಾತ್ರವಲ್ಲದೆ ಆಯಾ ಗ್ರಾಮಕ್ಕೆ ಸೇರಿರುವ ಮಜರೆಗಳೂ, ಯಾವುದಾದರೂ ಮ್ಯುನಿಸಿಪಾಲಿಟಿಯ ಎಲ್ಲೆಯೊಳಗೆ

ಸೇರಿಹೋಗದ ಆಯಾ ಗ್ರಾಮದ ಸಮಸ್ತ ಜಮೀನುಗಳಿಗೂ ಸೇರಿದೆ. ಈ ಗ್ರಾಮಠಾಣ, ಕೊಪ್ಪಲು, ಮಜರೆಗಳಲ್ಲಿ ಮನೆಗಳೇ ಇಲ್ಲದೆ ಇರಬಹುದು. ಇವು ಗಳಿಗೆ ಬೇರೆ ಹೆಸರು ಇರಬಹುದು. ಆದರೂ ಅವು ಆ ಗ್ರಾಮಕ್ಕೆ ಸೇರಿದಂತೆ ಥಾವಿಸಬೇಕು. ಬೇಟಿರಾಕ್ ಗ್ರಾಮಗಳು, ಜನ ವಾಸಮಾಡದ "ಅಮಾನಿಕೆರೆ" "ನಾಲಾಹಂತ" "ಕಾವಲು" ಇವು ಎಲ್ಲ ಗ್ರಾಮಗಳಾಗಿಯೇ ಥಾವಿಸಲ್ಪಡುತ್ತವೆ. ಹಳ್ಳಿ ಹೌದೇ ಅಲ್ಲವೇ ಯೆನ್ನುವುದಕ್ಕೆ ಇಷ್ಟೆನೋಡಬೇಕಾದದ್ದು. ರೆವಿನ್ಯು ಸರ್ವೆ ಇಲಾಖೆಯವರು ಈ ಪ್ರದೇಶವನ್ನು ಪ್ರತ್ಯೇಕ ಅಳತೆಮಾಡಿ ನಕಾಸೆ ತಯಾರಿಸಿದ್ದಾರೆಯೇ ಇಲ್ಲವೆ? ತಾಲ್ಲೋಕು ರಿಕಾರ್ಡಿನಲ್ಲಿ ಇರುವ ಗ್ರಾಮಗಳ ಪಟ್ಟಿಯಲ್ಲಿ ಈ ಹಳ್ಳಿ ಸೇರಿದೆಯೇ ಇಲ್ಲವೆ? ನಕಾಶೆಯೊಂದು ತಯಾರಾಗಿ ಪಟ್ಟಿಯಲ್ಲಿ ಸೇರಿರುವ ಹಳ್ಳಿಯೆಲ್ಲ ಸೆಂಸಸ್ ರೆಕ್ಕಕ್ಕೆ "ಹಳ್ಳಿ" ಎಂದು ಗಣನೆಗೆ ಒರುತ್ತದೆ.

೨೨. ಮೊಹಲ್ಲಾ.—ನಗರಗಳಲ್ಲಿ ಖಚಿತವಾದ ಎಲ್ಲೆಗಳೊಳಗೆ ಅಡಗಿರುವ ವಿಥಾಗ ಒಂದಕ್ಕೆ ಮೊಹಲ್ಲಾ ಅಥವಾ ವಾರ್ಡು ಯೆಂತ ಹೆಸರು.

೨೩. ಮನೆ.—ಹಂಗಾಮಿ ಅಥವಾ ಖಾಯಂ ವಾಸಕ್ಕೆ ಯೋಗ್ಯವಾದ ಹಂಗಾಮಿ ಅಥವಾ ಖಾಯಂ ಕಟ್ಟಡಕ್ಕೆ ಮನೆಯೆಂತ ಹೆಸರು. ಸಾಧಾರಣವಾಗಿ ವಾಸಕ್ಕೆ ಉಪಯೋಗಿಸದೇ ಇದ್ದರೂ ಸೆಂಸಸ್ಸು ರಾತ್ರಿ ಯಾರಾದರೂ ಬಂದು ತಂಗುವುದಕ್ಕೆ ಲಾಯಖಾಗಿರುವ ಕಟ್ಟಡವನ್ನು ಮನೆಯೆಂತಲೇ ಥಾವಿಸಬೇಕು. ಕಟ್ಟಡಗಳಿಗೆಲ್ಲಾ ಸೆಂಸಸ್ಸಿಗಾಗಿ ಪ್ರತ್ಯೇಕ ನಂಬರು ಕೊಡಬೇಕು. "ವಾಸದ ಮನೆ" ಯೆಂಬುದನ್ನು ಮೂರನೇ ಅಧ್ಯಾಯದಲ್ಲಿ ವಿವರಿಸಿದೆ.

೨೪. ಬ್ಲಾಕ್.—೩೦ರಿಂದ ೫೦ ಮನೆಗಳನ್ನು ಒಳಗೊಂಡು ಒಬ್ಬ ಎನ್ಯೂಮರೇಟರ್ ಎಣಿಕೆ ಮಾಡಬಹುದಾದ ಆಖ್ಯೆರ ಸೆಂಸಸ್ ತುಕಡಿಗೆ ಬ್ಲಾಕ್ ಯೆಂತ ಹೆಸರು.

೨೫. ಸರಕಲ್.—ಒಬ್ಬ ಸೂಪರ್‌ವೈಸರ ವಿಚಾರಣೆಗೆ ಒಳಪಟ್ಟ ಆಡಕವಾದ ೧೦-೧೫ ಬ್ಲಾಕುಗಳ ಗುಂಪು ಒಂದಕ್ಕೆ ಸರಕಲ್ ಯಂತ ಹೆಸರು.

೨೬. ಥಾರ್ಜ್.—ಥಾರ್ಜ ಸೂಪರಿಂಟೆಂಡೆಂಟರವರ ಮೇಲ್ವಿಚಾರಣೆಗೆ ಒಳಪಟ್ಟ ಸರ್ಕಲ್‌ಗಳ ಗುಂಪು ಒಂದಕ್ಕೆ "ಥಾರ್ಜ್" ಯೆಂತ ಹೆಸರು. ಸಾಧಾರಣವಾಗಿ "ಪಟ್ಟಣ" ಗಳೂ ತಾಲ್ಲೋಕುಗಳೂ ಪ್ರತ್ಯೇಕ ಥಾರ್ಜುಗಳಾಗಿ ವಿಂಗಡಮಾಡಲ್ಪಡುತ್ತವೆ. ತಾಲ್ಲೋಕು ದೊಡ್ಡದಾಗಿದ್ದರೆ ಕೆಲವು ಹೋಬಳಿಗಳನ್ನೇ ಒಂದು ಥಾರ್ಜ್‌ಗಿ ಮಾಡಬಹುದು. ನಗರಗಳಲ್ಲಿ ಕೆಲವು ಮೊಹಲ್ಲಾಗಳನ್ನೇ ಸೇರಿಸಿ ಪ್ರತ್ಯೇಕ ಥಾರ್ಜು ಮಾಡಬಹುದು.

೨೭. "ಸ್ಪೆಷಲ್ ಟ್ರಾಕ್ಟ್".—ಸಂಸ್ಥಾನಾಮಳೆ ಎನ್ಯೂಮರೇಟರುಗಳು ಮೊದಲ ಮತ್ತು ಆಖ್ಯೆರು ಎಣಿಕೆಯಲ್ಲಿ ಷೆಡ್ಯೂಲುಗಳನ್ನು ಭರ್ತಿಮಾಡುವಂತೆ ಕೆಲವು ಪ್ರದೇಶಗಳಲ್ಲಿ ಮಾಡುವುದು ಸಾಧ್ಯವಿಲ್ಲ. ರಾತ್ರಿ ಹೋಗುವುದಕ್ಕೆ ಸಾಧ್ಯವಿಲ್ಲದ ಗುಡ್ಡಗಾಡು ಇಂಥಾ ಪ್ರದೇಶ. ಇನ್ನೂ ಕೆಲವು ಸ್ಥಳದಲ್ಲಿರುವ ಜನಗಳನ್ನು ಎಣಿಕೆ ಮಾಡಲು ಸಾಧ್ಯವಿಲ್ಲದೆ ಸುಮಾರಿನಮೇಲೆ ಲೆಖ್ಖಮಾಡಬೇಕಾಗುತ್ತದೆ. ಈ ಪ್ರದೇಶಗಳಿಗೆ ಹೊತ್ತುತಪ್ಪಿದ ಎಣಿಕೆಯ ಅಥವಾ ಅಂದಾಜ್ ಎಣಿಕೆಯ ಪ್ರದೇಶ ಎಂತ ಹೆಸರು.

೮. ಸೆನ್ಸಸ್ ನಮೂನೆಗಳು.

೨೮. ಥಾರ್ಜ್ಪಟ್ಟಿ.—ಒಂದೊಂದು ನಗರ, ಪಟ್ಟಣ, ಗ್ರಾಮಕ್ಕೂ ಅವುಗಳ ವಾರ್ಡ್, ಮೊಹಲ್ಲಾಗಳನ್ನೂ ಆಯಾ ಗ್ರಾಮಗಳನ್ನೂ ಕುರಿತು ಕೆಲವು ತಪಶೀಲುಗಳನ್ನು ತೋರಿಸುವ ತಖ್ತೆಯೊಂದನ್ನು ತಯಾರು ಮಾಡುತ್ತದೆ. ಇದಕ್ಕೆ ಥಾರ್ಜ್ ಲಿಸ್ಟುಎಂದು ಹೆಸರು. ಎಣಿಕೆಯ ಬಗ್ಗೆ ವಿಭಾಗಗಳನ್ನು ಮಾಡುವುದರಲ್ಲೂ ಆಯಾ ವಿಭಾಗಗಳ ಕೆಲಸಕ್ಕೆ ಜನರನ್ನು ಏರ್ಪಡಿಸುವುದರಲ್ಲೂ ಇದು ಉಪಯೋಗಕ್ಕೆ ಬರುತ್ತದೆ.

೨೯. ಸರ್ಕಲ್ಪಟ್ಟಿ.—ಇದು ಥಾರ್ಜ್ ಲಿಸ್ಟಿನಿಂದ ತಯಾರಿಸುವ ತಖ್ತೆ. ಈತಖ್ತೆ ಒಂದೊಂದು ಸರ್ಕಲಿನಲ್ಲಿ ಯಾವ ಯಾವ ಗ್ರಾಮವಿದೆ, ಆಯಾ ಗ್ರಾಮ ಎಷ್ಟು ಬ್ಲಾಕ್ಆಗಿ ವಿಭಾಗವಾಗಿದೆ, ಒಂದೊಂದು ಬ್ಲಾಕನಲ್ಲಿ ಎಷ್ಟು ಮನೆಯಿದೆ ಎಂಬುದನ್ನೂ ಎನ್ಯೂಮರೇಟರುಗಳ ಹೆಸರನ್ನೂ ಸರ್ಕಲ್ ಸೂಪರ್ವೈಸರ ಹೆಸರನ್ನೂ ತೋರಿಸುತ್ತದೆ.

೩೦. ಮನೆಗಳ ಪಟ್ಟಿ.—ಒಂದೊಂದು ಗ್ರಾಮ, ವಾರ್ಡ್ ಅಥವಾ ಮೊಹಲ್ಲಾವನ್ನು ಕುರಿತು ಅದರಲ್ಲಿರುವ ಮನೆಗಳನ್ನೂ ಆಯಾ ಮನೆಯೊಳಗಿದೆಂಬುದನ್ನೂ ಅದರಲ್ಲಿ ವಾಸಮಾಡುವ ಸಂಸಾರಗಳ ಯಜಮಾನರು ಯಾರೆಂಬುದನ್ನೂ ತೋರಿಸುವ ತಖ್ತೆಗೆ ಹೌಸ್ಲಿಸ್ಟು ಅಥವಾ ಮನೆಗಳ ಪಟ್ಟಿ ಎಂದು ಹೆಸರು.

೩೧. ಬ್ಲಾಕುಪಟ್ಟಿ.—ಗ್ರಾಮ, ವಾರ್ಡ್ ಅಥವಾ ಮೊಹಲ್ಲಾದಲ್ಲಿರುವ ಒಂದೊಂದು ವಿಭಾಗವನ್ನು ಕುರಿತು ಮೇಲೆ ನಮೂದಾದ ತಪಶೀಲನ್ನು ತೋರಿಸುವ ತಖ್ತೆ. ಇದನ್ನು ಮನೆಗಳ ಪಟ್ಟಿಯನ್ನು ನೋಡಿ ತಯಾರಿಸುತ್ತದೆ. ಒಂದು ಗ್ರಾಮವನ್ನು ಒಂದೇ ಬ್ಲಾಕ್ ಆಗಿ ಮಾಡಿರುವ ಸಂದರ್ಭದಲ್ಲಿ ಆ ಗ್ರಾಮದ ಬ್ಲಾಕ್ಪಟ್ಟಿಯೂ ಮನೆಗಳ ಪಟ್ಟಿಯೂ ಒಂದೇ ಆಗಿರುತ್ತವೆ.

೩೨. ಸಾಮಾನ್ಯ ಷೆಡ್ಯೂಲ್.—ಪ್ರಜೆಗಳ ತಪಶೀಲನ್ನು ನಮೂದಿಸಲು ಎನ್ಯೂಮರೇಟರಿಗೆ ಕೊಡುವ ತಖ್ತೆ.

೩೩. ಸಂಸಾರದ ಷೆಡ್ಯೂಲ್.—ಎನ್ಯೂಮರೇಟರು ಎಣಿಕೆ ಮಾಡವುದಕ್ಕೆ ಬದಲಾಗಿ ತಾವೇ ಬರೆದುಕೊಡುತ್ತೇವೆಂದು ಅಪೇಕ್ಷಿಸುವ ಕೆಲವು ಕುಟುಂಬಗಳ ಯಜಮಾನರಿಗೆ ಹಂಚುವ ಷೆಡ್ಯೂಲ್ ತಖ್ತೆ.

೩೪. ಮಾದರಿಯ ಷೆಡ್ಯೂಲ್.—ಎಣಿಕೆ ಮಾಡುವ ರೀತಿಯನ್ನು ತೋರಿಸುವುದಕ್ಕಾಗಿ ಕೆಲವು ಉದಾಹರಣೆಗಳನ್ನು ಅಚ್ಚುಹಾಕಿರುವ ಷೆಡ್ಯೂಲ್ ಅಥವಾ ತಖ್ತೆಗೆ ಮಾದರಿ ಷೆಡ್ಯೂಲ್ ಎಂದು ಹೆಸರು.

೩೫. ಅಭ್ಯಾಸದ ಷೆಡ್ಯೂಲ್.—ಸೆನ್ಸಸ್ ಆಫಿಸರುಗಳಿಗೆ ಅಭ್ಯಾಸಕೊಡುವುದಕ್ಕಾಗಿಯೂ ಅವರು ಎಷ್ಟರ ಮಟ್ಟಿಗೆ ಎಣಿಕೆ ಕೆಲಸವನ್ನು ತಿಳಿದುಕೊಂಡಿದಾರೆಯೆಂಬುದನ್ನು ನೋಡುವುದಕ್ಕಾಗಿಯೂ ಅವರ ಕೈಗೆ ಕೊಡುವ ಪಟ್ಟಿ. ಇದು ಸಾಮಾನ್ಯ ಷೆಡ್ಯೂಲಲ್ಲ, ಬೇರೆ, ಎಂದು ತಿಳಿಯುವುದಕ್ಕಾಗಿ ಇದನ್ನು ಕೆಂಪು ಮಸಿಯಲ್ಲಿ ಅಚ್ಚು ಮಾಡಿರುತ್ತದೆ.

೩೬: ರಕ್ಷಾಪತ್ರ.—ಸಾಮಾನ್ಯ ಷೆಡ್ಯೂಲನ್ನೂ ಬ್ಲಾಕ್ಪಟ್ಟಿಯನ್ನೂ ಸೇರಿಸಿ ಮೇಲೆ ಹಾಕಿ ಹೊಲಿದಿರುವ ಹೊರಮ್ಯೆಕಾಗದಕ್ಕೆ ರಕ್ಷಾಪತ್ರವೆಂದು ಹೆಸರು.

ಎನ್ಯೂಮರೇಟರುಗಳಿಗೆ ತಿಳಿದಿರಬೇಕಾದ ವಿಷಯ, ಎನ್ಯೂಮರೇಟರ ಗೋಷ್ವಾರೆ, ಮಾದರಿ ತಪ್ತೆ, ಇವೆಲ್ಲ ಇದರ ಮೇಲೆ ಅಚ್ಚಾಗಿರುತ್ತವೆ. ಬ್ಲಾಕ್ ಇಂಥದು ಇವರ ಸೆಂಸಸ್ ಆಫಿಸರುಗಳು ಇಂಥವರೆಂಬುದನ್ನೂ ಕೆಲಸ ಎಷ್ಟರಮಟ್ಟಿಗೆ ನಡೆದಿದೆ ಎಂಬುದನ್ನೂ ನಮೂದಿಸುವುದಕ್ಕೆ ಅದರ ಮೇಲೆ ಸ್ಥಳ ಇರುತ್ತದೆ.

೩೭. ಎನ್ಯೂಮರೇಷ್ ಪುಸ್ತಕ.—ಒಂದೇ ಒಂದು ಬ್ಲಾಕಿನ ಎಣಿಕೆಗಾಗಿ ಕೊಡುವ ಸಾಮಾನ್ಯ ಷೆಡ್ಯೂಲುಗಳ ಪುಸ್ತಕಕ್ಕೆ ಎನ್ಯೂಮರೇಷ್ ಪುಸ್ತಕವೆಂದು ಹೆಸರು. ಇದರಲ್ಲಿ ಒಂದು ರಕ್ಷಾಪತ್ರ, ಆಯಾ ಬ್ಲಾಕಿನ ಪಟ್ಟಿ, ಆ ಬ್ಲಾಕಿನಲ್ಲಿ ಎಣಿಕೆಗೆ ಬೇಕಾಗುವಷ್ಟು ಸಾಮಾನ್ಯ ಷೆಡ್ಯೂಲು ಇವು ಸೇರಿರುತ್ತವೆ.

೩೮. ಎನ್ಯೂಮರೇಟರ ಗೋಷ್ವಾರೆ. – ಆಯಾ ಬ್ಲಾಕಿನಲ್ಲಿರುವ ಮನೆಗಳ ಸಂಖ್ಯೆ, ಅದರಲ್ಲಿಯ ಜನರ ಸಂಖ್ಯೆಯನ್ನು ತೋರಿಸುವ ಗೋಷ್ವಾರೆ. ಇದು ರಕ್ಷಾಪತ್ರದ ಮೇಲೆ ಇರುತ್ತದೆ. ಸೆಂಸಸ್ ಆದ ಮಾರನೆಯ ದಿವಸಕ್ಕೆ ಇದನ್ನು ಎನ್ಯೂಮರೇಟರು ಫರ್ತಿಮಾಡಬೇಕು. ಇದರಲ್ಲಿ ನಮೂದಾದ ಅಂಕೆಗಳನ್ನು ಪರೀಕ್ಷಿಸಿದ ಮೇಲೆ ಇದನ್ನು ರಕ್ಷಾಪತ್ರದಿಂದ ಹರಿದು ಬೇರೆಯಾಗಿ ಇತರ ಗೋಷ್ವಾರೆಗಳೊಂದಿಗೆ ಇಡುವಂತೆ ಇರುತ್ತದೆ.

೩೯. ಸರ್ಕಲ್ ಗೋಷ್ವಾರೆ.—ಎನ್ಯೂಮರೇಟರ್ ಗೋಷ್ವಾರೆಯಲ್ಲಿ ಬ್ಲಾಕ್‌ವಾರಿಯವ ತೇರೀಜುಗಳನ್ನು ಸೇರಿಸಿ ಸರ್ಕಲಿಗಾಗಿ ಮಾಡುವ ಗೋಷ್ವಾರೆ.

೪೦. ಥಾಜ್ಯು ಗೋಷ್ವಾರೆ.—ಸರ್ಕಲ್ ಗೋಷ್ವಾರೆಯಲ್ಲಿರುವ ತೇರೀಜುಗಳನ್ನು ಸೇರಿಸಿ ಆಯಾ ಥಾರ್ಜಿನ ಬಗ್ಗೆ ಅದೇ ತಪಶೀಲನ್ನು ತೋರಿಸುವಂತೆ ತಯಾರಿಸುವ ಗೋಷ್ವಾರೆ.

ಎರಡನೇ ಅಧ್ಯಾಯ.

ಸೆನಸಸ್ ವಿಭಾಗಗಳ ಬಗ್ಗೆ ಸಲಹೇಪಟ್ಟಿ

ಸೆಕ್ಷನ್ ೧.

ಸಾಮಾನ್ಯ ನಿಬಂಧನೆಗಳು.

೪೧. ವಿಭಾಗಗಳಬಗ್ಗೆ ಸಲಹೇಪಟ್ಟಿ.—ಒಂದೊಂದು ಥಾರ್ಜಿಗೂ ವಿಭಾಗಗಳನ್ನು ತೋರಿಸುವ ಒಂದು ಸಲಹೇಪಟ್ಟಿಯನ್ನು ತಯಾರು ಮಾಡಬೇಕು.

ಈ ಸಲಹೆಯನ್ನು ಮಾಡುವುದರಲ್ಲಿ ತಿಳಿಯಬೇಕಾದ ಅಂಶಗಳನ್ನು ಆ ತಖ್ತೆಯ ಮೇಲೆ ಬರೆದಿದೆ.

*　　*　　*　　*

೪೭. ಸರ್ಕಲುಗಳನ್ನು ಏರ್ಪಡಿಸುವ ವಿಧಾನ.—ಸರ್ಕಲುಗಳನ್ನು ಏರ್ಪಡಿಸುವುದರಲ್ಲಿ ಈ ಕೆಳಗೆ ಕಂಡ ವಿಷಯಗಳನ್ನು ಗಮನದಲ್ಲಿಡಬೇಕು.

(i) ಗ್ರಾಮಾಂತರದಲ್ಲಿ ಒಂದೇಕಡೆ ಒತ್ತಾಗಿ ಇರುವ ಹತ್ತು ಹದಿನೈದು ಗ್ರಾಮಗಳನ್ನು ಸೇರಿಸಿ ಒಂದು ಸರ್ಕಲನ್ನು ಮಾಡಬೇಕು. ನಗರಗಳಲ್ಲಿ ಪಟ್ಟಣಗಳಲ್ಲಿ ೪೦೦ ಅಥವಾ ೬೦೦ ಮನೆಗಳಿಗೆ ಮೀರದಂತೆ ಹತ್ತು ಹದಿನೈದು ಬ್ಲಾಕುಗಳನ್ನು ಸೇರಿಸಿ ಸರ್ಕಲ್ ಮಾಡಬೇಕು.

(ii) ಒಬ್ಬ ಸೂಪರ್‌ವೈಸರು ಎಷ್ಟು ಗ್ರಾಮದಲ್ಲಿ (1) ಮನೆಗಳಿಗೆ ನಂಬರು ಹಾಕುವುದು (2) ಎನ್ಯೂಮರೇಟರುಗಳನ್ನು ತರಬೇತು ಮಾಡುವುದು (3) ಆಖ್ಯೆರು ಎಣಿಕೆಯ ಉಸ್ತುವಾರಿ ನೋಡಿಕೊಳ್ಳುವುದು ಇಷ್ಟು ಕೆಲಸವನ್ನು ನೋಡಿಕೊಳ್ಳಬಹುದೋ ಅಷ್ಟು ಗ್ರಾಮವನ್ನು ಒಂದು ಸರಕಲಿನಲ್ಲಿ ಸೇರಿಸಬಹುದು. ಇದಕ್ಕಿಂತ ಹೆಚ್ಚು ಗ್ರಾಮಗಳನ್ನು ಒಂದು ಸರ್ಕಲಿನಲ್ಲಿ ಸೇರಿಸಬಾರದು. ಒಬ್ಬ ಸೂಪರವೈಸರಿಗೆ ಒಂದು ಸರ್ಕಲಿನ ಮೇಲ್ವಿಚಾರಣೆಗಿಂತ ಹೆಚ್ಚು ಕೆಲಸ ಕೊಡಕೂಡದು.

(iii) ಸಾಕಾದಷ್ಟು ಜನ ತಕ್ಕ ಸೂಪರ್‌ವೈಸರುಗಳು ದೊರೆಯುವ ಪಕ್ಷ ಸರ್ಕಲುಗಳನ್ನು ಸಣ್ಣವನ್ನಾಗಿ ಮಾಡಿ ಅವುಗಳ ಸಂಖ್ಯೆಯನ್ನು ಹೆಚ್ಚಿಸುವುದೇ ಕ್ಷೇಮ.

(iv) ಬ್ಲಾಕುಗಳ ಸಂಖ್ಯೆ, ಮನೆಗಳ ಸಂಖ್ಯೆ ಅಲ್ಲದೆ ಸೂಪರವೈಸರು ಎಷ್ಟುದೂರ ಸುತ್ತಬೇಕಾಗುತ್ತದೆಯೆಂಬುದನ್ನು ನೋಡತಕ್ಕದ್ದು ಆವಶ್ಯಕ. ಗುಡ್ಡ ಕಾಡಿನ ಪ್ರದೇಶದಲ್ಲಿ ಗ್ರಾಮಗಳು ಒಂದರಿಂದೊಂದು ದೂರದಲ್ಲಿರುವುದರಿಂದ ಒಂದೊಂದು ಸರ್ಕಲಿನಲ್ಲಿ ಸಾಧ್ಯವಾದಷ್ಟು ಕಡಿಮೆ ಗ್ರಾಮಗಳನ್ನು ಸೇರಿಸಬೇಕು.

ಅಂಥ ಸರ್ಕಲುಗಳಿಗೆ ಸೂಪರುವೈಸರುಗಳನ್ನು ನಿಯಮಿಸುವುದರಲ್ಲಿ ಗುಮಾಸ್ತರನ್ನು ನಿಯಮಿಸುವುದಕ್ಕಿಂತ ಪ್ರಯಾಣಕ್ಕೆ ಅನುಕೂಲವಾಗಿ ಏನಾದರೂ ಒಂದು ವಾಹನವಿರತಕ್ಕಂಥ ರೆವಿನ್ಯೂ ಇನ್‌ಸ್ಪೆಕ್ಟರು ಮೊದಲಾದ ಆಫೀಸರುಗಳನ್ನು ನಿಯಮಿಸುವುದು ಒಳ್ಳೆಯದು.

(v) ಗ್ರಾಮಾಂತರಗಳಲ್ಲಿ ಒಂದೊಂದು ಹೋಬಳಿಯನ್ನು, ಪಟ್ಟಣಗಳಲ್ಲಿ ಒಂದೊಂದು ವಾರ್ಡನ್ನು, ನಗರಗಳಲ್ಲಿ ಒಂದೊಂದು ಮೊಹಲ್ಲಾವನ್ನು ಒಂದು, ಎರಡು, ಮೂರು, ಹೀಗೆ ಪೂರ್ಣ ಸಂಖ್ಯೆಯ ಸರ್ಕಲುಗಳನ್ನಾಗಿ ವಿಂಗಡಿಸಬೇಕು. ಅಂಥ ಸರ್ಕಲುಗಳು ಒಂದರ ಪಕ್ಕದಲ್ಲಿ ಒಂದು ಇರಬೇಕು. ಎಂದರೆ, ಬೇರೆ ಬೇರೆ ಹೋಬಳಿಗಳ ಗ್ರಾಮಗಳನ್ನು, ಬೇರೆ ಬೇರೆ ವಾರ್ಡು ಅಥವಾ ಮೊಹರ್ಲಾದ ಬ್ಲಾಕುಗಳನ್ನು, ಒಂದು ಸರ್ಕಲಿನಲ್ಲಿ ಸೇರಿಸಬಾರದು.

೪೮. ಸಣ್ಣ ಹೋಬಳಿ ಒಂದೊಂದನ್ನು ಒಂದೊಂದು ಸರ್ಕಲಿನಂತೆ ಏರ್ಪಡಿಸಿ ಅದಕ್ಕೆ ಆಯಾ ಹೋಬಳಿ ರೆವಿನ್ಯೂ ಇನ್‌ಸ್ಪೆಕ್ಟರನ್ನು ಸೂಪರ್‌ವೈಸರಾಗಿ ಮಾಡಬಹುದು. ದೊಡ್ಡದಾದ ಹೋಬಳಿಗಳನ್ನು ಎರಡು ಅಥವಾ ಮೂರು ಸರ್ಕಲುಗಳಾಗಿ ವಿಭಾಗ ಮಾಡಬಹುದು.

೪೯. ಬ್ಲಾಕುಗಳನ್ನು ವಿಂಗಡಿಸುವ ವಿಧಾನ.—ಬ್ಲಾಕುಗಳನ್ನು ಏರ್ಪಡಿಸುವುದರಲ್ಲಿ ಈ ಕೆಳಗೆ ಕಂಡ ಅಂಶಗಳನ್ನು ಗಮನದಲ್ಲಿಡಬೇಕು.

(i) ಒಂದು ಬ್ಲಾಕಿನಲ್ಲಿ ಒಟ್ಟಾಗಿ ಒಂದುಕಡೆ ಇರುವ ವಾಸದ ಮನೆಗಳು ೩೦೦ರಿಂದ ೫೦೦ ವರಿಗೆ ಇರಬೇಕು.

(ii) ಗ್ರಾಮಾಂತರದಲ್ಲಿ ಒಂದು ಬ್ಲಾಕೆಂದರೆ ಸಣ್ಣದಾದ ಒಂದು ಗ್ರಾಮವಾಗಿರಬೇಕು, ಅಥವಾ ದೊಡ್ಡದಾದ ಗ್ರಾಮದ ಒಂದು ಕಡೆಯಿರುವ ಮನೆಗಳ ಒಂದು ಗುಂಪಾಗಿರಬೇಕು.

(iii) ಒಂದು ಬ್ಲಾಕಿನಲ್ಲಿ ಬೇರೆ ಬೇರೆ ಗ್ರಾಮಗಳನ್ನು ಸೇರಿಸಬಾರದು. ಬೇರೆ ಬೇರೆ ಗ್ರಾಮಗಳ ಸ್ವಲ್ಪ ಸ್ವಲ್ಪ ಭಾಗವನ್ನು ಸೇರಿಸಿ ಒಂದೇ ಬ್ಲಾಕನ್ನು ಮಾಡಬಾರದು. ಎಂದರೆ ಒಂದು ಬ್ಲಾಕು ಸ್ವಲ್ಪ ಒಂದು ಗ್ರಾಮದಲ್ಲಿ ಇನ್ನು ಸ್ವಲ್ಪ ಇನ್ನೊಂದು ಗ್ರಾಮದಲ್ಲಿ ಹೀಗಿರಬಾರದು.

(iv) ಪಟ್ಟಣಗಳಲ್ಲಿ ಒಂದೊಂದು ಬ್ಲಾಕಿಗೂ ಬೀದಿ, ದೊಡ್ಡ ಚರಂಡಿ ಮೊದಲಾದ ಸುಲಭವಾಗಿ ಗುರುತಿಸಬಹುದಾದ ಎಲ್ಲೆಯಿರಬೇಕು.

(v) ಬ್ಲಾಕುಗಳು ಬಹು ದೊಡ್ಡವೂ ಆಗಿರಕೂಡದು ಬಹಳ ಸಣ್ಣವೂ ಆಗಿರಕೂಡದು. ಒಬ್ಬ ಎನ್ಯೂಮರೇಟರ್ ರಾತ್ರಿ ೭ ಘಂಟೆಯಿಂದ ೧೨ ಘಂಟೆ ಒಳಗೆ ಎಷ್ಟು ಮನೆಗಳಲ್ಲಿ ಆಖ್ಯೆರು ಎಣಿಕೆ ಮಾಡಬಹುದೋ ಅಷ್ಟು ಮನೆಗಳಿರಬೇಕು. ಮನೆಗಳು

ಒತ್ತಾಗಿರುವಕಡೆ ಒಬ್ಬ ಎನ್ಯೂಮರೇಟರ್ ೫೦ ಮನೆಗಳಲ್ಲಿ ಎಣಿಕೆ ಮಾಡಬಹುದು. ಕೆಲವು ವೇಳೆ ೬೦ ಮನೆಗಳಲ್ಲಿಯೂ ಮಾಡಬಹುದು. ಮನೆಗಳು ಒತ್ತಾಗಿಲ್ಲದೆ ಬಿಡಿ ಬಿಡಿಯಾಗಿ ಹರಡಿದ್ದರೆ ಇಪ್ಪತ್ತು ಮನೆಗಳಲ್ಲಿ ಎಣಿಕೆಮಾಡುವುದಕ್ಕಾಗುವುದಿಲ್ಲ. ಆರಂಭದ ಎಣಿಕೆಗೂ ಆಖೈರು ಎಣಿಕೆಗೂ ಮಧ್ಯದಲ್ಲಿ ವಿಶೇಷ ಜನ ಬಂದು ಹೋಗದ ಪ್ರದೇಶಗಳಲ್ಲಿ ಎಂದರೆ ರಸ್ತೆಗಳಿಂದ ದೂರವಾಗಿರುವ ಒಳನಾಡಿನ ಗ್ರಾಮಗಳಲ್ಲಿ ಬ್ಲಾಕ್ ಒಂದಕ್ಕೆ ಮನೆಗಳ ಸಂಖ್ಯೆ ಸ್ವಲ್ಪ ಹೆಚ್ಚಾಗಿದ್ದರೂ ಇರಬಹುದು.

(vi) ಒಂದರಿಂದ ಒಂದು ದೂರವಾಗಿರುವ ಮಜರೆ ಗ್ರಾಮಗಳನ್ನು ಒಂದೊಂದನ್ನೂ ಬೇರೆ ಬ್ಲಾಕಾಗಿ ಏರ್ಪಡಿಸಬೇಕು. ಮಜರೆಗಳು ಒಂದಕ್ಕೊಂದು ಸಮೀಪವಾಗಿದ್ದು ಎರಡು ಅಥವಾ ಮೂರರ ಒಟ್ಟು ಮನೆಗಳ ಸಂಖ್ಯೆ ಒಂದು ಬ್ಲಾಕಿನ ಪ್ರಮಾಣವನ್ನು ಮೀರದಿದ್ದಲೆ ಅಂಥ ಎರಡು ಮೂರು ಮಜರೆಗಳನ್ನು ಒಂದು ಬ್ಲಾಕಾಗಿ ಮಾಡಬಹುದು. ಇಂಥ ಸಂದರ್ಭಗಳಲ್ಲಿ ಬ್ಲಾಕಿನ ಮನೆಗಳ ಒಟ್ಟು ಸಂಖ್ಯೆ ೫೦ಕ್ಕೆ ಹೆಚ್ಚಾಗಿರಬಾರದು

(vii) ಸಾಕಾದಷ್ಟು ಜನ ಎನ್ಯೂಮರೇಟರುಗಳು ದೊರೆಯುವ ಸಂದರ್ಭಗಳಲ್ಲಿ ಬ್ಲಾಕುಗಳನ್ನು ಸ್ವಲ್ಪ ಸಣ್ಣವಾಗಿಯೇ ಮಾಡಿ ಅವುಗಳ ಸಂಖ್ಯೆಯನ್ನು ಹೆಚ್ಚಾಗಿಟ್ಟುಕೊಳ್ಳುವುದೇ ಒಳ್ಳೆಯದು.

(viii) ಎನ್ಯೂಮರೇಟರುಗಳು ಸಾಲದೇ ಇರುವ ಪಕ್ಷದಲ್ಲಿ ಒಬ್ಬ ಎನ್ಯೂಮರೇಟರಿಗೆ ಅಕ್ಕಪಕ್ಕದ ಎರಡು ಅಥವ ಮೂರು ಬ್ಲಾಕುಗಳನ್ನು ಎಣಿಸುವ ಕೆಲಸವನ್ನು ವಹಿಸಬಹುದು. ಆದರೆ ಒಬ್ಬ ಮನುಷ್ಯನು ನೋಡಿಕೊಳ್ಳಬಹುದಾದ್ದಕ್ಕಿಂತ ಹೆಚ್ಚಿನ ಕೆಲಸವನ್ನು ಒಬ್ಬ ಎನ್ಯೂಮರೇಟರಿಗೆ ವಹಿಸದಂತೆ ಎಚ್ಚರವಾಗಿರಬೇಕು ಎರಡು ಮೂರು ಬ್ಲಾಕನ್ನು ಒಬ್ಬ ಎನ್ಯೂಮರೇಟರಿಗೇ ವಹಿಸಿದಾಗ್ಯೂ ಆಯಾ ಬ್ಲಾಕಿನ ಸೆನ್ಸಸ್ ಪುಸ್ತಕಗಳನ್ನು ಬೇರೆ ಬೇರೆಯಾಗಿಯೇ ಇಡಬೇಕು. ಎಂದರೆ ಒಂದೊಂದು ಬ್ಲಾಕಿಗೂ ಬೇರೆ ಒಂದು ಬ್ಲಾಕು ಲಿಸ್ಟು, ಬೇರೆ ಒಂದು ಎನ್ಯೂಮರೇಷನ್ ಪುಸ್ತಕ ಇರಬೇಕು. ಎರಡು ಬ್ಲಾಕಿಗೂ ಎನ್ಯೂಮರೇಟರ್ ಒಬ್ಬನಾದ ಮಾತ್ರಕ್ಕೆ ಬ್ಲಾಕು ಎರಡೂ ಒಂದಾದಂತೆ ಭಾವಿಸಲಾಗದು. ಪೂಳೇ ಗೋಡೆಯಿಲ್ಲದ ಬಂಡಿ ಮೋಟು, ಬ್ಲಾಕಿನೊಳಗೆ ಅನುಕೂಲವಾಗಿ ಸೇರಿಸಲಾಗದ ಹೊಳೆಯ ಕಡು, ಇಂಥವುಗಳನ್ನು ಬೇರೆ ಬ್ಲಾಕುಗಳಾಗಿ ವಿಂಗಡಿಸಬೇಕು.

ಮೂರನೇ ಅಧ್ಯಾಯ.

ಮನೆಗಳಿಗೆ ಮತ್ತು ಇತರ ಕಟ್ಟಡಗಳಿಗೆ ಅಂಕಿಹಾಕುವುದು.

ಸೆಕ್ಷ್ಯ ೧.

ಯಾವ ಕಟ್ಟಡಗಳಿಗೆ ನಂಬರು ಹಾಕತಕ್ಕದ್ದು.

೫೫. ಸಾಮಾನ್ಯ ನಿಯಮ.—ಒಂದೊಂದು ಗ್ರಾಮ, ಪಟ್ಟಣ, ನಗರದಲ್ಲೂ ಸಂಸಾರ ಇರುವ ಅಥವಾ ಇಲ್ಲದಿರುವ ಒಂದೊಂದು ವಾಸದ ಮನೆಗೂ ೧೯೩೧ನೇ ಇಸವಿ ಫೆಬ್ರವರಿ ೨೬ನೇ ತಾರೀಖಿನ ದಿನ ಯಾರಾದರೂ ವಾಸಮಾಡಬಹುದಾದ ಒಂದೊಂದು ಆವರಣಕ್ಕೂ ಪಾಂಕ್ತವಾಗಿ ಒಂದೊಂದು ಸಂಖ್ಯೆಯನ್ನು ಕೊಡಬೇಕು.

೫೬. ವಾಸದ ಮನೆ.—ವಾಸದ ಮನೆ ಅಂದರೆ ಒಂದು ಅಡಿಗೆ ಒಂದು ಊಟ ಮಾಡುವ ಸಂಸಾರವೊಂದು ವಾಸಮಾಡುತ್ತಿರುವ ಮನೆ ಅಥವಾ ಮನೆಯ ಭಾಗ. ಮನೆಯವರೊಂದಿಗೆ ವಾಸವಾಗಿರುವ ಆಳುಗಳು ಆ ಸಂಸಾರದಲ್ಲಿ ಸೇರಿದಂತೆ ಭಾವಿಸತಕ್ಕದ್ದು. ಒಂದು ವಾಸದ ಮನೆ ಹೌದೇ ಅಲ್ಲವೆ ಎನ್ನುವದಕ್ಕೆ ಒಂದು ಅಡಿಗೆ ಒಂದು ಊಟ ಮಾಡುವವರು ವಾಸವಾಗಿರುವ ಭಾಗ ಯಾವುದು ಎನ್ನುವುದು ಗುರುತು.

೫೭. ವಶಾರಕ್ಕೆ ನಂಬರು ಹಾಕುವುದು.—ಒಂದು ಮನೆಯಲ್ಲಿ ಒಂದು ಸಂಸಾರ ಮಾತ್ರ ವಾಸವಾಗಿದ್ದರೆ ಅಂಥಾ ಮನೆಗೆ ಒಂದೇ ಒಂದು ನಂಬರನ್ನು ಹಾಕತಕ್ಕದ್ದು. ಆ ನಂಬರನ್ನು ಅಂಥಾ ಮನೆಯ ತಲೆಬಾಗಿಲಿನ ಕದದ ಬಳಿ ಹಾಕಬೇಕು.

ಎರಡು ಮೂರು ಸಂಸಾರಗಳು ಒಂದು ಕಟ್ಟಡದಲ್ಲಿ ವಾಸಮಾಡುತ್ತಿರುವಲ್ಲಿ ಒಂದೊಂದು ಸಂಸಾರದ ವಾಸದ ಮನೆಯ ತಲೆಬಾಗಿಲಿನಲ್ಲೂ ಬೇರೆ ನಂಬರನ್ನು ಹಾಕಬೇಕು.

ಒಂದೊಂದು ಸಂಸಾರದ ವಾಸದ ಭಾಗಕ್ಕೂ ಬೇರೆ ತಲೆ ಬಾಗಿಲಿದ್ದರೆ ಅಂಥಂಥಾ ತಲೆಬಾಗಿಲಿಗೆ ಆಯಾ ಮನೆಯ ನಂಬರನ್ನು ಹಾಕತಕ್ಕದ್ದು. ಎಲ್ಲಾ ಸಂಸಾರಗಳೂ ಒಂದು ತಲೆಬಾಗಿಲಿನಲ್ಲಿ ಓಡ್ಯಾಡುತ್ತಿರುವಲ್ಲಿ ಒಳಗಡೆ ವಾಸದ ಮನೆಯ ಬಾಗಿಲಿನ ಮೇಲೆ ನಂಬರು ಹಾಕಿರುವುದಲ್ಲದೆ ಇಂಥ ತಲೆಬಾಗಿಲಿನಲ್ಲಿ ಆ ಎಲ್ಲಾ ನಂಬರುಗಳನ್ನೂ ನಮೂದಿಸಬೇಕು. ಎಂದರೆ ಒಂದು ಕಟ್ಟಡವಿದೆ ಎನ್ನಿ. ಅದರಲ್ಲಿ ಐದು ಸಂಸಾರದವರು ವಾಸಮಾಡುತ್ತಾರೆ. ಅವರು ವಾಸಮಾಡುತ್ತಿರುವ ಭಾಗದಲ್ಲಿ ಅವರವರ ಮನೆಯ ಬಾಗಿಲಿನ ಮೇಲೆ ೫೦, ೫೧, ೫೨, ೫೩, ೫೪, ಎಂದು ನಂಬರುಗಳನ್ನು ಹಾಕಿದೆಯೆಂದು ಇಟ್ಟುಕೊಳ್ಳೋಣ. ಈ ಐದು ಸಂಸಾರದವರೂ ಬೀದಿಗೆ ಹೋಗಬೇಕಾದರೆ ಒಂದು ತಲೆಬಾಗಿಲಿನಿಂದ

ಹೋಗುತ್ತಾರೆ ಎನ್ನಿ. ಆಗ ಬೀದಿಯಕಡೆ ತಲೆಬಾಗಿಲಿನ ಮೇಲೆ ೫೦–೫೪ ಎಂದು ಸಂಖ್ಯೆಯನ್ನು ನಮೂದಿಸಬೇಕು. ಇದರಿಂದ ತಲೆಬಾಗಿಲನ್ನು ನೋಡಿ ದವರಿಗೆ ೫೦ ರಿಂದ ೫೪ ರವರಿಗಿನ ಐದು ವಾಸದ ಮನೆಗಳು ಈ ಕಟ್ಟಡದಲ್ಲಿವೆ ಎಂದು ಸೂಚಿಸಿದಂತಾಗುತ್ತದೆ. ತಲೆಬಾಗಿಲಿಂದ ಒಳಗೆ ಹೋದರೆ ಐದು ಸಂಸಾರದ ವಾಸದ ಮನೆಗಳಿಗೂ ಬೇರೆ ಬೇರೆ ನಂಬರುಗಳು ಇರುತ್ತವೆ. ಒಂದೇ ಕಟ್ಟಡದಲ್ಲಿ ವಾಸವಾಗಿರುವ ಹಲವು ಸಂಸಾರಗಳು ಬೇರೆ ಬೇರೆ ಬಾಗಿಲುಗಳನ್ನು ಉಪಯೋಗಿಸುವ ಸಂದರ್ಭದಲ್ಲೂ ಆ ಕಟ್ಟಡದ ತಲೆಬಾಗಿಲಿಗೆ ಅದರಲ್ಲಿ ವಾಸವಾಗಿರುವ ಎಲ್ಲಾ ಸಂಸಾರಗಳ ವಾಸದ ಮನೆಯ ನಂಬರುಗಳನ್ನೂ ನಮೂದಿಸುವುದೇ ಕ್ಷೇಮ. ಹೀಗೆ ಮಾಡಿದಲ್ಲಿ ಎನ್ಯೂಮರೇಟರು ಅಜಾಗ್ರತೆಯಿಂದ ಯಾವದಾದರೊಂದು ವಾಸದ ಮನೆಯ ಎಣಿಕೆಯನ್ನು ಮರೆಯದಂತೆ ಆಗುತ್ತದೆ.

೫೮. ಇತರ ಕಟ್ಟಡಗಳು.—ಗಿರಣಿಗಳು, ಕಾರ್ಖಾನೆಗಳು ಬಾರ್‌ಲೈಬ್ರೆರಿಲ್ಲೀದಾರ್ ಲೈನುಗಳು, ಮಠ, ಮಕ್ಕಾ ಮುಂತಾದುವುಗಳಿಗೂ ವಾಸದ ಮನೆಗಳಿಗೆ ಹೇಗೋ ಹಾಗೆ ಒಂದೊಂದು ನಂಬರನ್ನು ಕೊಡಬೇಕು. ಕಛೇರಿ ಕಟ್ಟಡಗಳು, ದೇವಸ್ಥಾನಗಳು, ವಾಸದ ಮನೆಯಲ್ಲಿ ಸೇರದ ಬೇರೆಯಾದ ಅಂಗಡಿಗಳು, ಛತ್ರಗಳು, ಧರ್ಮಶಾಲೆಗಳು, ಮುಸಾಫರ್ ಒಂಗಲೆಗಳು, ಪೌಳಿ ಗೋಡೆ ಹಾಕಿರುವ ಬಂಡಿ ಮೋಟುಗಳು, ಕೂಲಿ ಜನರಿಗಾಗಿ ತತ್ಕಾಲಕ್ಕೆ ಹಾಕಿರುವ ಗುಡಿಸಲುಗಳು, ಇವೆಲ್ಲಕ್ಕೂ ನಂಬರು ಬೀಳಬೇಕು.

೫೯. ನಂಬರು ಹಾಕುವುದರ ಉದ್ದೇಶ.—ಸೆನ್ಸಸ್ ದಿನದ ರಾತ್ರೆ ಅಕಸ್ಮಾತ್ ಯಾವಕಾರಣದಿಂದಲೇ ಆಗಲಿ ಅವರವರ ಮನೆಯಲ್ಲಿ ಎಣಿಕೆಗೆ ಬರದೆ ಇರುವ ಯಾವ ಒಬ್ಬ ಇಬ್ಬರಾದರೂ ಜನರು ತಂಗಬಹುದಾದ ಸ್ಥಳವನ್ನೆಲ್ಲಾ ಎನ್ಯೂಮರೇಟರ್ ಹೋಗಿ ನೋಡಬೇಕು. ಆದ್ದರಿಂದಲೇ ವಾಸದಮನೆಗಳಿಗಲ್ಲದೆ ಇತರ ಕಟ್ಟಡಗಳಿಗೂ ನಂಬರು ಹಾಕಬೇಕೆಂದು ನಿಯಮವಿರುವುದು.

೬೦. ನಂಬರು ಹಾಕದೇ ಬಿಡಬಹುದಾದ ಕಟ್ಟಡಗಳು.—ಪಾಳುಮನೆಗಳನ್ನು ನಂಬರು ಹಾಕದೆ ಬಿಡಬಹುದು. ಖಾನೇಷುಮಾರಿ ಅಥವಾ ಮ್ಯುನಿಸಿಪಲ್ ಲೆಬ್ಬಗಳಲ್ಲಿ ಬರಿಯ ನಿವೇಶನಗಳಿಗೆ ನಂಬರು ಕೊಡುವುದುಂಟು. ಇಂಥಾ ನಿವೇಶನಗಳಿಗೆ ಸೆನ್ಸಸ್ ನಂಬರುಗಳು ಕೊಡಬೇಕಾದದ್ದಿಲ್ಲ. ಹೀಗೆಯೇ ದನದ ಕೊಟ್ಟಿಗೆ, ಲಾಯ, ಹಿಂದಗಡೆಯ ಮನೆ, ಇವುಗಳಿಗೂ ನಂಬರು ಕೊಡಬೇಕಾದದ್ದಿಲ್ಲ. ಯಾವುದಾದರೂ ನಿವೇಶನದ ಮೇಲೆ ಕಟ್ಟಡದ ಕೆಲಸ ನಡೆಯುತ್ತಿರುವಲ್ಲಿ ಅಂಥಾ ಕಟ್ಟಡ ಸೆನ್ಸಸ್ ರಾತ್ರಿಗೆ ಮುಂದಾಗಿ ಮುಗಿದು ವಾಸಕ್ಕೆ ಅರ್ಹವಾಗುವ ಸಂದರ್ಭವಿದ್ದರೆ ಅದಕ್ಕೆ ಒಂದು ನಂಬರನ್ನು ಕೊಡಬೇಕು. ಸೆನ್ಸಸಿಗೆ ಮೊದಲು ಅದು ಮುಗಿಯುವ ಸಂದರ್ಭವಿಲ್ಲದಿದ್ದರೆ ಅಂಥಾ ಕಟ್ಟಡಕ್ಕೆ ನಂಬರು ಕೊಡಬೇಕಾದದ್ದಿಲ್ಲ.

೬೧. ಯಾವ ಅಂಗಡಿಗೆ ಬೇರೆ ನಂಬರು ಅನಾವಶ್ಯಕ.—ಅಂಗಡಿದಾರರು ವಾಸದ ಮನೆಯ ಒಂದು ಭಾಗವನ್ನು ಅಂಗಡಿಯಾಗಿ ಮಾಡಿಕ್ಕೊಂಡಿದ್ದಲ್ಲಿ ಅಂಥಾ ಅಂಗಡಿ ಭಾಗಕ್ಕೆ ಬೇರೆ ನಂಬರು ಕೊಡಬೇಕಾದದ್ದಿಲ್ಲ.

* * * * *

೬೩. ರೈಲ್ವೆ ಕಟ್ಟಡಗಳು, ಕೈಕಂಬಗಳ ನಡುವೆ ಯಿರತಕ್ಕವು.—ರೈಲೆಸ್ಟೇಷನ್ ಸಮೀಪದಲ್ಲಿ ಕೈಕಂಬಗಳ ಮಧ್ಯಭಾಗದಲ್ಲಿರುವ ಎಲ್ಲಾ ಕಟ್ಟಡಗಳಿಗೂ

ರೈಲ್ವೆ ಅಧಿಕಾರಿಗಳು ನಂಬರುಹಾಕುತ್ತಾರೆ. ಅಂಥ ಕಟ್ಟಡಗಳು ಒಂದು ಗ್ರಾಮದ ಎಲ್ಲೆಯಲ್ಲಿ ಇದ್ದರೂ ಅವುಗಳನ್ನು ಆ ಗ್ರಾಮದಲ್ಲಿ ನಂಬರು ಮಾಡಬೇಕಾದದ್ದಿಲ್ಲ.

೬೪. ಕೈಕಂಬಗಳ ಹೊರಗೆ ಇರುವ ರೈಲ್ವೆ ಕಟ್ಟಡಗಳು:—ರೈಲ್ವೆ ಅಧಿಕಾರಿಗಳು ಕೈ ಕಂಬಗಳ ಹೊರಗೆಯಿರುವ ರೈಲ್ವೆ ಕಟ್ಟಡಗಳಿಗೆ ನಂಬರು ಹಾಕುವುದಿಲ್ಲ. ಅವಕ್ಕೆಲ್ಲ ಗ್ರಾಮ ನೌಕರರು ಗ್ರಾಮದ ಕಟ್ಟಡಗಳೊಂದಿಗೆ ನಂಬರು ಹಾಕಬೇಕು.

೬೫. ಪೌಳಿಗೋಡೆಯಿಲ್ಲದ ಬಂಡಿಮೋಟುಗಳು ಮತ್ತು ಹೊಳೇಕಡುಗಳು.—ಪೌಳಿ ಗೋಡೆಯಿಲ್ಲದ ಬಂಡಿಮೋಟುಗಳಿಗೂ, ಸೈನ್ಯ ತಂಗುವ ಸ್ಥಳಗಳಿಗೂ ಹೊಳೆಗಳ ದಡದ ಕಡುಗಳಿಗೂ ನಂಬರು ಕೊಡಬೇಕಾದದ್ದಿಲ್ಲ. ಆದರೂ ಸೆನ್ಸಸ್ ದಿನದ ರಾತ್ರಿ ಎನ್ಯೂಮರೇಟರ್ ಆ ಸ್ಥಳಗಳಿಗೆ ಹೋಗಬೇಕಾಗಿರುವುದರಿಂದ ಮನೆಗಳ ಪಟ್ಟಿಯ ಅಡಿಯಲ್ಲಿ ಇಂಥಾ ಸ್ಥಳಗಳನ್ನು ನಂಬರುಕೊಡದೆ ನಮೂದಿಸಬೇಕು.

*　　*　　*　　*　　*

ಸೆಕ್ಷನ್ ೨.

ನಂಬರು ಮಾಡುವುದನ್ನು ಕುರಿತು ತಪ್ಸೀಲು

೬೬. ನಂಬರು ಮಾಡುವವರು.—ಮ್ಯುನಿಸಿಪಾಲಿಟಿಗಳಿರುವ ಸ್ಥಳಗಳಲ್ಲಿ ಮುನಿಸಿಪಲ್ ಅಧಿಕಾರಿಗಳು ಮನೆಗಳಿಗೆ ಸೆನ್ಸಸ್ ನಂಬರು ಹಾಕತಕ್ಕದ್ದು, ಉಳಿದ ಸ್ಥಳಗಳಲ್ಲಿ ಗ್ರಾಮನೌಕರರೂ, ಸ್ಥಳೀಯ ಅಧಿಕಾರಿಗಳೂ ಹಾಕತಕ್ಕದ್ದು.

೬೭. ಕೆಲಸದ ಆರಂಭ ಮತ್ತು ಮುಗಿವು.—ಡೆಪ್ಯುಟಿ ಕಮಿಷನರವರು ಅಥವಾ ಪ್ರೆಸಿಡೆಂಟರು ಅಪ್ಪಣೆ ಮಾಡುವ ಮೇರೆ ೧೯೩೦ನೆ ಇಸವಿ ಜೂನ್ ತಿಂಗಳ ಆರಂಭದಲ್ಲಿ ಒಂದು ದಿವಸ ಮನೆಗಳಿಗೆ ನಂಬರು ಹಾಕುವ ಕೆಲಸ ಡಿಸ್ಟ್ರಿಕ್ಟು ಮತ್ತು ನಗರಗಳಲ್ಲಿ ಎಲ್ಲಾ ಕಡೆಯೂ ಆರಂಭ ಆಗಬೇಕು; ಮತ್ತು ಆರಂಭವಾದ ಮೇಲೆ ಸಾಧ್ಯವಾದಷ್ಟು ಜಾಗ್ರತೆ ಮುಗಿಸಲ್ಪಡಬೇಕು. ಕೊನೇ ಪಕ್ಷ ೧೯೩೦ನೆ ಸೆಪ್ಟಂಬರು ೧೫ನೇ ತಾರೀಕಿನ ವೇಳೆಗೆ ಈ ಕೆಲಸ ಎಲ್ಲಾ ಕಡೆಯೂ ಮುಗಿದಿರಬೇಕು.

೬೮. ನಂಬರು ಪಾಂಕ್ತವಾಗಿರಬೇಕು.—ಗ್ರಾಮಾಂತರದಲ್ಲಿ ಗ್ರಾಮಕ್ಕೆಲ್ಲ ಸಾಲಾಗಿ ಒಂದು ಎಣಿಕೆ ಬರಬೇಕು. ಮ್ಯುನಿಸಿಪಾಲಿಟಿಗಳಲ್ಲಿ ಒಂದೊಂದು ಡಿವಿಜನ್ನಿಗೆ ಒಂದು ಎಣಿಕೆ ಇರಬೇಕು. ಎನ್ಯೂಮರೇಟರು ನಂಬರುವಾರ್ ಮನೆಯಿಂದ ಮನೆಗೆ ಹೋಗುವುದಕ್ಕೆ ಸುಲಭವಾಗಿ ಅನುಕೂಲವಾಗಿರುವರೀತಿಯಲ್ಲಿ ನೋಡಿ ನಂಬರು ಹಾಕಬೇಕು. ಬೇರೆ ಒಂದೊಂದು ಗ್ರಾಮಕ್ಕೆ ಬೇರೆ ನಂಬರು ಎಣಿಕೆ ಆರಂಭ ಮಾಡಬೇಕು. ಒಂದೊಂದು ಮುನಿಸಿಪಲ್ ಡಿವಿಜನಿಗೂ ಬೇರೆ ಎಣಿಕೆ ಆರಂಭಿಸಬೇಕು. ಖಾನೇಷುಮಾರಿ ಮುಂತಾದ ಬೇರೆ ಕೆಲಸಕ್ಕಾಗಿ ಮನೆಗಳಿಗೆ ನಂಬರು ಹಾಕಿರುವಲ್ಲಿ ಆ ನಂಬರುಗಳನ್ನೇ ಸೆನ್ಸಸ್ ಕೆಲಸಕ್ಕೂ ಇಟ್ಟುಕೊಳ್ಳುತ್ತೇವೆ ಎನ್ನಬಾರದು.

೬೯ ಮಜರೆಗಳನ್ನು ಗ್ರಾಮದ ಮನೆಗಳ ಒಟ್ಟು ಎಣಿಕೆಯಲ್ಲಿ ಸೇರಿಸಬೇಕು.—ಗ್ರಾಮಕ್ಕೆ ಬೇರೆ ಮಜರೆಗೆ ಬೇರೆಯಾಗಿ ನಂಬರು ಆರಂಭಮಾಡಕೂಡದು. ಅಸಲಿ ಗ್ರಾಮದ ಮನೆಗಳ ನಂಬರು ಮುಗಿದ ಮೇಲೆ ಮಜರೆ ಮನೆಗ

ಳಿಗೂ ಅದೇ ಎಣಿಕೆಯನ್ನು ಮುಂದಕ್ಕೆ ತೆಗೆದುಕೊಂಡು ಹೋಗಬೇಕು. ಹಾಗೆಯೇ ಬಂಜಾರರ (ಲಂಬಾಣಿಗಳ) ತಾಂಡಗಳು, ಕೊರಚ, ಕೊರಮ, ಸೋಲಿಗ, ಬೈಲುವಡ್ಡ ಮುಂತಾದವರ ಗುಡಿಸಲುಗಳು, ಆದಿಕರ್ನಾಟಕರ ಕೇರಿ ಫಾಟ್ ಪೋಲೀಸು ಸ್ಟೇಷ್ಟ್, ಉಕ್ಕಡ, ಈಡಿಗರ ಗುಡಿಸಲು, ಹೊಲಗಳಲ್ಲಿರುವ ರೈತರ ವಾಸದ ಮನೆಗಳು, ಇವುಗಳಲ್ಲಿ ಯಾವುದನ್ನೂ ಮರೆಯದೆ ಗ್ರಾಮದ ಅದೇ ಎಣಿಕೆಯಲ್ಲಿ ಸೇರಿಸಬೇಕು. ವಿಂಗಡವಾಗಿರುವ ಭಾಗವನ್ನು ಗುರುತಿಸುವುದಕ್ಕೂ, ಪಟ್ಟಿಯಲ್ಲಿ ಸುಲಭವಾಗಿ ಕಂಡುಹಿಡಿಯುವುದಕ್ಕೂ, ಅಲ್ಲಿ ಸೆಕ್ಷನ್ ಬ್ಲಾಕುಗಳನ್ನು ಏರ್ಪಡಿಸುವುದಕ್ಕೂ ಅನುಕೂಲಿಸುವಂತೆ ಭಾರ್ಜು ಲಿಸ್ಟಿನಲ್ಲಿ ಅಂಥಾ ಭಾಗ ಆರಂಭವಾಗುವ ಕಡೆ ಕೆಂಪು ಮಸಿಯಿಂದ ಒಂದು ಗೆರೆ—ಎಳೆದು ಇದು ಪ್ರತ್ಯೇಕವಾದ ಭಾಗ ಎಂದು ಸೂಚಿಸಬಹುದು.

೭೧. ಒಂದು ಪಟ್ಟಣ ಅಥವಾ ನಗರದ ಆವರಣದಲ್ಲಿ ಒಂದು ಹಳ್ಳಿಯ ಸ್ವಲ್ಪಭಾಗ ಸೇರಿರುವ ಸಂದರ್ಭದಲ್ಲಿ ಹಾಗೆ ಸೇರಿದ ಆ ಹಳ್ಳಿಯ ಜಮೀನಿನ ಮೇಲಿರುವ ಮನೆಗಳಿಗೆ ಆಯಾ ಪಟ್ಟಣದ ಅಥವಾ ನಗರದ ನಂಬರುಗಳನ್ನು ಕೊಡತಕ್ಕದ್ದು. ಪಟ್ಟಣದಲ್ಲಿ ಸೇರಿದ ಭಾಗವಲ್ಲದೆ ಉಳಿದ ಅಂಥಾ ಗ್ರಾಮದ ಮನೆಗಳಿಗೆ ಗ್ರಾಮದ ಪರವಾಗಿ ಬೇರೆ ಸಂಖ್ಯೆಯನ್ನು ಆರಂಭಿಸಬೇಕು. ಇದು ಈ ಕೆಳಗಿನ ಉದಾಹರಣೆಯಿಂದ ಸ್ಪಷ್ಟವಾಗುವುದು.

ದಾವಣಗೆರೆ ಮ್ಯುನಿಸಿಪಾಲಿಟಿಯಲ್ಲಿ ಆನೆಕೊಂಡ, ನಿಟ್ಟುವಳ್ಳಿ ಗ್ರಾಮಗಳ ಜಮೀನು ಸೇರಿದೆ ಎಂದು ಇಟ್ಟುಕೊಳ್ಳಿ. ದಾವಣಗೆರೆ ಮುನಿಸಿಪಾಲಿಟಿಯ ಒಳಾಯದಲ್ಲಿ ಇರಬಹುದಾದ ಜಮೀನಿನ ಮೇಲೆ ಕಟ್ಟಿರುವ ಎಲ್ಲಾ ಮನೆಗಳೂ ದಾವಣಗೆರೆ ಮ್ಯುನಿಸಿಪಾಲಿಟಿಗೆ ಸೇರಿದುವು. ಮ್ಯುನಿಸಿಪಾಲಿಟಿಯ ಸೆಕ್ಷನ್ ನಂಬರು ಕೆಲಸದಲ್ಲಿ ಅಂಥ ಮನೆಗಳ ನಂಬರನ್ನು ಹಾಕಬೇಕು. ದಾವಣಗೆರೆಯ ಒಳಾಯದಲ್ಲಿ ಸೇರಿದ ಜಮೀನುಗಳು ಹೋಗಲಾಗಿ ಆನೆಕೊಂಡ ನಿಟ್ಟುವಳ್ಳಿ ಗ್ರಾಮಗಳಲ್ಲಿ ಉಳಿದಿರುವ ಭಾಗಕ್ಕೆಲ್ಲಾ ಆನೆಕೊಂಡಕ್ಕೆ ಬೇರೆ, ನಿಟ್ಟುವಳ್ಳಿಗೆ ಬೇರೆ ಆಯಾ ಗ್ರಾಮದ ಪರವಾಗಿ ನಂಬರು ಹಾಕಬೇಕು.

೭೨. ಮೊದಲನೇ ಕೊನೇ ನಂಬರುಗಳು.—ಒಂದು ಗ್ರಾಮ ಅಥವಾ ಮೊಹಲ್ಲಾಕ್ಕೆ ಮನೆ ಎಣಿಕೆ ಒಂದಾಗಿರುವುದರಿಂದ ಒಂದೊಂದು ಬ್ಲಾಕಿನ ಮೊದಲನೇ ಮನೆ ಯಾವುದು ಕೊನೇ ಮನೆ ಯಾವುದು ಎಂದು ತಿಳಿಯುವುದಕ್ಕೆ ಗುರುತುಮಾಡಿರಬೇಕು. ಗ್ರಾಮದಲ್ಲಿ ನೂರು ಮನೆ ಇದೆ ಎಂದು ಇಟ್ಟುಕೊಳ್ಳಿ: ಒಂದರಿಂದ ನೂರರವರೆಗೆ ನೂರು ಮನೆಗೂ ನೂರು ನಂಬರನ್ನು ಹಾಕುವುದಾಗುತ್ತದೆ. ಅದರಲ್ಲಿ ೧ರಿಂದ ೩೦ರ ವರೆಗೆ ಒಂದು ಬ್ಲಾಕಿರಬಹುದು. ೩೧ರಿಂದ ೬೮ರ ವರೆಗೆ ಇನ್ನೊಂದು ಬ್ಲಾಕಿರಬಹುದು. ೬೮ರಿಂದ ೧೦೦ರ ವರೆಗೆ ಮೂರನೇ ಬ್ಲಾಕಿರಬಹುದು. ಇಂಥಾ ಸಂದರ್ಭದಲ್ಲಿ ಆಯಾ ಬ್ಲಾಕಿನ ಮೊದಲನೆ ಮನೆಗಳಾದ ೧ನೇ ಮನೆ, ೩೧ನೇ ಮನೆ, ೬೮ನೇ ಮನೆ ಇವುಗಳ ಮೇಲೆ ನಂಬರಿನ ಸುತ್ತ ಒಂದು ತ್ರಿಕೋಣವನ್ನು V ಬರೆಯಬಹುದು. ಆಯಾ ಬ್ಲಾಕಿನಲ್ಲಿ ಕೊನೆಯ ಮನೆ ಆದ ೩೦,೬೭, ೧೦೦ನೆ ನಂಬರಿನ ಮನೆಗಳ ಮೇಲೆ ನಂಬರಿನ ಸುತ್ತ ಒಂದು ವೃತ್ತವನ್ನು O ಬರೆಯಬಹುದು.

೭೩. ಕಟ್ಟಡಗಳನ್ನು ಮರೆಯಕೂಡದು.—ಮನೆಗಳಿಗೆ ನಂಬರು ಹಾಕುವಲ್ಲಿ ಯಾವ ಮನೆಯೂ ಕೈಬಿಟ್ಟು ಹೋಗದ ಹಾಗೆ ಎಚ್ಚರಿಕೆಯಿಂದ ನೋಡಿ

ಕೊಳ್ಳಬೇಕು. ಸೆನ್ಸಸ್ ರಾತ್ರಿಯ ವೇಳೆಗೆ ಮುಗಿದು ವಾಸಕ್ಕೆ ಅರ್ಹವಾಗಬಹುದೆಂದು ತೋರುವ ಎಲ್ಲಾ ಕಟ್ಟಡಗಳಿಗೂ ಸಂಖ್ಯೆಯನ್ನು ಹಾಕಲೇಬೇಕು. ಯಾವ ದಾದರೂ ಕಾರಣದಿಂದ ಒಂದು ಕಟ್ಟಡಕ್ಕೆ ನಂಬರು ಹಾಕದೇ ಕೈತಪ್ಪಿದರೆ ಅಥವಾ ಊರಿನ ಕಟ್ಟಡಗಳಿಗೆ ನಂಬರು ಹಾಕಿದ ಮೇಲೆ ಕಟ್ಟಡ ಮುಗಿದು ಉಪಯೋಗಕ್ಕೆ ಬಂದರೆ ಅಂಥಾ ಸಂದರ್ಭದಲ್ಲಿ ಹಾಗೆ ಕೈಬಿಟ್ಟುಹೋದ ಅಥವಾ ಹೊಸದಾಗಿ ಉಪಯೋಗಕ್ಕೆ ಬಂದ ಮನೆಗೆ ಅದರ ಹಿಂದಿನ ಮನೆಯ ನಂಬರನ್ನು ಹಾಕಿ ಒಂದು ಉಪಸಂಖ್ಯೆಯನ್ನು ಸೇರಿಸಬೇಕು. ಎಂದರೆ ೫೬ನೆಯ ೫೬ನೆಯ ಕಟ್ಟಡಗಳ ಮಧ್ಯೆ ಇರತಕ್ಕ ಒಂದು ಮನೆ ಕೈಬಿಟ್ಟು ಹೋಗಿದ್ದರೆ ಅಥವಾ ಆ ಸ್ಥಳದಲ್ಲಿ ಒಂದು ಹೊಸಮನೆ ಆದರೆ ಅಂಥಾ ಮನೆಗೆ ೫೬/೧ ಎಂದು ಬರೆಯಬೇಕು. ಇನ್ನೊಂದು ಕಟ್ಟಡ ಹೊಸದಾಗಿ ಆಗಿದ್ದಲ್ಲಿ ೫೬/೨ ಎಂದು ಬರೆಯಬೇಕು.

೭೪. ನಂಬರುಗಳನ್ನು ಹೇಗೆ ಬರೆಯಬೇಕು.—ನಂಬರುಗಳನ್ನು ಯಾವದಾದರೂ ಒಂದು ಬಣ್ಣದಿಂದ ಬರೆಯಬೇಕು. ಒಂದೊಂದು ಗ್ರಾಮ, ಪಟ್ಟಣ ಅಥವಾ ನಗರದಲ್ಲಿ ಸೆನ್ಸಸ್ ನಂಬರಿಗಾಗಿ ಒಂದೇ ರೀತಿಯ ಬಣ್ಣವನ್ನು ಉಪಯೋಗಿಸಬೇಕು. ಮನೆಯ ಮುಂದುಗಡೆಯ ಬಾಗಿಲ ಮೇಲೆ ಅಥವಾ ಪಕ್ಕದಲ್ಲಿ ಗೋಡೆಯ ಮೇಲೆ ಸ್ಪಷ್ಟವಾಗಿ ತಿಳಿಯುವ ಕಡೆ ಬಿಳುಪಿನ ಮೇಲೆ ಬಣ್ಣದಲ್ಲಿ ಅಂಕೆಯನ್ನು ಬರೆಯಬೇಕು. ಮಳೆಯಿಂದ ತೊಯಿದು ಅಳಿಸಿಹೋಗುವುದರಿಂದಾಗಲಿ ಅಕಸ್ಮಾತ್ತಾಗಿ ಮಕ್ಕಳು ಆಟದ ವೇಳೆಯಲ್ಲಿ ತಿಕ್ಕುವುದು, ತಿದ್ದುವುದು ಮುಂತಾದ ಕಾರಣಗಳಿಂದಾಗಲಿ ಕೆಡದಂತೆ ಸರಿಯಾದ ಸ್ಥಳದಲ್ಲಿ ಅಂಕೆಯನ್ನು ಬರೆಯಬೇಕು. ೧೯೩೧ನೇ ಆಗಸ್ಟು ೧೯ನೇ ತಾರೀಖಿನ ವರೆಗೆ ಹಬ್ಬ ಹುಣ್ಣಿಮೆ ಮುಂತಾದ ಕಾರಣದಿಂದ ಸುಣ್ಣಬಣ್ಣ ಮಾಡುವಾಗ ಸೆನ್ಸಸ್ ಅಂಕೆಗಳನ್ನು ಅಳಿಸಕೂಡದೆಂದು ಮನೆಯ ಒಡೆಯನಿಗೆ ತಿಳಿಸಬೇಕು. ಅಂಕೆಗಳನ್ನು ಹಾಗೆ ಕೆಡಿಸುವವರು ಸೆನ್ಸಸ್ ರೆಗ್ಯುಲೇಷನ್ ಪ್ರಕಾರವಾಗಿ ಶಿಕ್ಷೆಗೆ ಗುರಿಯಾಗುವರೆಂದು ಅವರಿಗೆಎಚ್ಚರಿಕೆ ಹೇಳಬೇಕು. ಅಂಕೆಯನ್ನು ಕದದ ಮೇಲೆ ಬರೆಯದೇ ಇರುವುದುಒಳ್ಳೆಯದು. ಬಾಗಿಲಬಳಿ ಗೋಡೆಯ ಮೇಲೆ ಬರೆಯುವುದು ಅನುಕೂಲ. ಬಡವರು ವಾಸಮಾಡುವದಾದ ಮರದ ಬಾಗಿಲುಗಳಿಲ್ಲದ ಗಿಡ್ಡು ಗೋಡೆಯ ಹುಲ್ಲು ಛಾವಣಿ ಮನೆಯ ಮೇಲೆ ನಂಬರು ಬರೆಯುವುದಕ್ಕೆ ಅನುಕೂಲವಿರುವುದಿಲ್ಲ. ಇಂಥ ಸಂದರ್ಭದಲ್ಲಿ ನಂಬರನ್ನು ಒಂದು ಹಲಗೆ ಅಥವಾ ತಗಡು, ಇಟ್ಟಿಗೆ ಅಥವಾ ಹೆಂಚು, ಇನ್ನೇನೂ ಇಲ್ಲದಿದ್ದರೆ ಒಂದು ಕಲ್ಲು, ಇಂಥಾದ್ದರ ಮೇಲೆ ಬರೆದು ಮನೆಯ ಯಜಮಾನನ ಕೈಗೆ ಕೊಟ್ಟು ಭದ್ರವಾಗಿಟ್ಟಿರಬೇಕೆಂದೂ ಸೆನ್ಸಸ್ ಅಧಿಕಾರಿಗಳು ಕೇಳಿದಾಗ ಅದನ್ನು ತೋರಿಸಬೇಕೆಂದೂ ಅವರಿಗೆ ತಿಳುವಳಿಕೆ ಕೊಡಬೇಕು.

೭೫. ಬಣ್ಣ ಮತ್ತು ಬಣ್ಣ ಹಚ್ಚುವ ಸಾಮಾನು.—ಬೇರೆ ಯಾವ ಸಾಮಾನೂ ಇಲ್ಲದಿದ್ದಲ್ಲಿ ಬಿಳಿಯ ಬಣ್ಣವನ್ನು ಸುಣ್ಣದಿಂದ ಹಚ್ಚಿ ಅದರ ಮೇಲೆ ಕಂದನೆ ಅಥವಾ ಕಾವಿಯಿಂದ ಅಂಕೆಗಳನ್ನು ಬರೆಯಬಹುದು. ಬರೆಯುವುದಕ್ಕೆ ಈಚಲು ಅಥವಾ ತೆಂಗಿನ ಮಟ್ಟೆಯ ಒಂದು ತುಂಡನ್ನು ಕೊನೆ ಜಜ್ಜಿಗುಜ್ಜನ್ನು ಮಾಡಿಕೊಳ್ಳಬಹುದು ಯಾವ ಪದಾರ್ಥವನ್ನು ಉಪಯೋಗಿಸುವುದೆಂದು ತಾಲ್ಲೂಕಿನ ಅಧಿಕಾರಿಗಳು ನಿಶ್ಚಯಿಸಿ ಗ್ರಾಮನಾಕರರಿಗೆ ಅದನ್ನುಮಾಡಿಸಿ ಹಂಚಬಹುದು ಪಟ್ಟಣಗಳಲ್ಲಿ, ನಗರಗಳಲ್ಲಿ, ಎಕ್ಸೈಜು ಡಿಪಾರ್ಟುಮೆಂಟಿನವರು ಈಚಲು ಮರದ ನಂಬರಿಗೆ ಉಪಯೋಗಿಸುವ ಬಣ್ಣವನ್ನು ಸೆನ್ಸಸ್ ನಂಬರಿಗಾಗಿ ಉಪಯೋಗಿಸಬಹುದು.